

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 72 Friday 22-11-2024 E-mail : maruti.b.hosamani76@gmail.com Page: 4 Price : Rs. 1/-


## ಶೌಚಾಲಯ ಬಳಕೆ ಕುಟುಂಬದ ಗೌರವ ಹೆಚ್ಚಿಸಿರು



**ಸಿಹಿ ಕಹಿ ಸುದ್ದಿ**

**ಹೊನ್ನಾಕಟ್ಟಿ** : ಬಾಗಲಕೋಟ ತಾಲೂಕಿನ ಹೊನ್ನಾಕಟ್ಟಿಯ ಅಂಗನವಾಡಿ ಕೇಂದ್ರದಲ್ಲಿ ಶೌಚಾಲಯ ದಿನ ಬಾಲ್ಯ ವಿವಾಹ ತಡೆ, ಭ್ರೂಣ ಹತ್ಯ ತಡೆ ಕಾನೂನು ಅರಿವು ಬಗ್ಗೆ ಗ್ರಾಮ ಆರೋಗ್ಯ ನೈರ್ಮಲ್ಯ ಸಮೀತಿ ಸಭೆ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶಾಲಾ ಮುಖ್ಯ ಶಿಕ್ಷಕರಾದ ಎಸ್.ಎಚ್ ಬೀರಣ್ಣವರ ವಹಿಸಿದ್ದರು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್. ಎಸ್ ಅಂಗಡಿಯವರು ಸ್ವಚ್ಛಭಾರತ ಅಭಿಯಾನದ ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮ ಮಾಡಲು ಎಲ್ಲರೂ ಶೌಚಾಲಯ ಉಪಯೋಗಿಸಿ ರೋಗ ಮುಕ್ತ ಗ್ರಾಮಕ್ಕಾಗಿ ಕೈಜೋಡಿಸಿರಿ. ಬಾಲ್ಯ ವಿವಾಹ ಕಾನೂನು ಬಾಹಿರ ಶಿಕ್ಷಾರ್ಹವಾಗಿದೆ. ಬಾಲ್ಯ ವಿವಾಹ ಮಾಡಬಾರದು ಹೆಣ್ಣು ಮಕ್ಕಳನ್ನು ಶಿಕ್ಷಣ ವಂತಳಾಗಿ ಮಾಡಿ ಲಿಂಗ ತಾರತಮ್ಯ ಮಾಡಬಾರದು, ಹಾಗೂ ವಿವಿಧ ಸಾಂಕ್ರಾಮುಕ ರೋಗಗಳ ತಡೆಗೆ ಮುಂಜಾಗ್ರತೆ ಕ್ರಮಗಳನ್ನು ಪಾಲಿಸಿ ಉತ್ತಮ ಆರೋಗ್ಯವನ್ನು ಸಂಪಾದಿಸಿ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ವಯಕ್ತಿಕ ಸ್ವಚ್ಛತೆ, ಸುತ್ತ ಮುತ್ತ ಪರಿಸರ ಸ್ವಚ್ಛತೆ, ಶುದ್ಧ ನೀರು ಸೇವಿಸಿ."ಆರೋಗ್ಯವಂತ ತಾಯಿಗೆ ಆರೋಗ್ಯವಂತ ಮಗು ಜನನ. ರಕ್ತ ಹೀನತೆಯಿರುವ ಗರ್ಭಿಣಿಯರು ಆರೋಗ್ಯ ಇಲಾಖೆಯಿಂದ ವಿತರಿಸುವ ಕಬ್ಬಿಣಾಂಶ ಮಾತ್ರೆ ತಪ್ಪದೇ ಸೇವಿಸಿರಿ. ಕಾಯಿಪಲ್ಲೆ, ತರಕಾರಿ, ಪೋಷಕಾಂಶಯುಕ್ತ ಆಹಾರ ಸೇವಿಸಿರಿ. ಹುಟ್ಟಿನಿಂದ 5 ವರ್ಷದ ವಯೋಮಾನ ಮಕ್ಕಳಲ್ಲಿ ಮಾರಕ ರೋಗಗಳ ತಡೆಗೆ ಸಮಯಕ್ಕನಸಾರ ಎಲ್ಲ ಲಸಿಕೆಗಳನ್ನು ತಪ್ಪದೇ ಮಕ್ಕಳಿಗೆ ಹಾಕಿಸಿ ಯಾವುದೇ ತರಹ ಆರೋಗ್ಯ ಸಮಸ್ಯೆಗಳಿಗೆ 104 ಕರೆ ಮಾಡಿ ಸೂಕ್ತ ಸಲಹೆ ಪಡೆಯಿರಿ ಎಂದರು. ಶಾಲಾ ಮುಖ್ಯ ಶಿಕ್ಷಕರಾದ ಎಸ್ ಎಚ್ ಬೀರಣ್ಣವರ್ ಮಕ್ಕಳನ್ನು ತಪ್ಪದೇ ಶಾಲೆಗೆ ಕಳಿಸಿ ಸರಕಾರ ಸೌಲಭ್ಯಗಳನ್ನು ಸದುಪಯೋಗ ಪಡಿಸಿ ಕೊಳ್ಳಬೇಕು. ಹೆಣ್ಣು ಮಕ್ಕಳನ್ನು ಓದಿಸಿರಿ ಹೆಣ್ಣು ಮಗು ಜಗದ ಕಣ್ಣು ಎಂದರು. ಗ್ರಾಮ ಆರೋಗ್ಯ ನೈರ್ಮಲ್ಯ ಸಮೀತಿ ಸಭೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆ ಸುಜಾತಾ ಎಸ್ ನೆಲವಡೆ ಆಶಾ ಕಾರ್ಯಕರ್ತೆ ಪದ್ಮಾ ಬಂಡಿವಡ್ಡರ ಗ್ರಾಮದ ಅಂಬವ್ವ ಸಂಜೀವಪ್ಪ ಗೌಡರ, ಬಸವ್ವ ಬೊಮ್ಮಣ್ಣ ಹುಗ್ಗಿ,ಭಾಗೀರಥಿ ಸೂರ್ಯವಂಶಿ, ರೇಣುಕಾ ಬೀಳಗಿ, ಪಾರವ್ವ ಬಿಲಕೇರಿ, ಭಾರತಿ ಗುಳೇದಗುಡ್ಡ, ಮಾಲಾ ಅನವಾಲ್, ಯಮನವ್ವ ಗೌಡರ್, ಪಪಾರ್ವತಿ ನರಸಪ್ಪನವರ, ಸೀತವ್ವ ಮಾದರ, ಶ್ರೀದೇವಿ ಬಿಲ್ ಕೇರಿ,ಮಾಲಾ ಸೂರ್ಯವಂಶಿ, ಗರ್ಭಿಣಿಯರು ತಾಯಿಂದಿರು ಮುದ್ದುಮಕ್ಕಳು ಭಾಗವಹಿಸಿದ್ದರು.

## ಅಖಿಲ ಕರ್ನಾಟಕ ಕಿಸಾನ್ ಜಾಗೃತಿ ಸಂಘದಿಂದ–ಆಕ್ರೋಶ

**ಸಿಹಿ ಕಹಿ ಸುದ್ದಿ**

**ಹೊಸಪೇಟೆ** : ಕೆ.ಕೆ.ಆರ್.ಡಿ.ಬಿ ಯೋಜನೆಯ ಅನುದಾನದಲ್ಲಿ ವಿಜಯನಗರ ಜಿಲ್ಲೆಗೆ 348 ಕೋಟಿ ಬಂದಿದೆ. ಇದರಲ್ಲಿ ಜಿಲ್ಲೆಯ ಕೇಂದ್ರ ಸ್ಥಾನ ಹೊಸಪೇಟೆ ತಾಲೂಕಿಗಿಂತ ಇತರೆ ತಾಲೂಕುಗಳಿಗೆ 60 ರಿಂದ 70 ಕೋಟಿ ಹಂಚಿಕೆಯಾಗಿದೆ. ವಿಜಯನಗರ ಕ್ಷೇತ್ರದ ಹೊಸಪೇಟೆಗೆ ಕೇವಲ 22 ಕೋಟಿ ಹಂಚಿಕೆಯಾಗಿದ್ದು. ಅನ್ಯಾಯವಾಗಿರೋದು ಎದ್ದು ಕಾಣುತ್ತಿದೆ. ಕೇವಲ 22 ಕೋಟಿ ಕೊಟ್ಟಿರುವುದು ಮಲತಾಯಿ ಧೋರಣೆ ತೋರಿಸಲಾಗಿದೆ ಮುಂದಿನ ದಿನಗಳಲ್ಲಿ ಹೊಸಪೇಟೆಗೆ ಬಂದ್ ಕರೆ ಕೊಡಲಾಗುವುದು ಎಂದು ಸರ್ಕಾರಕ್ಕೆ ಆಕ್ರೋಶ ಹೊರ ಹಾಕಿದರು.




ಅಖಿಲ ಕರ್ನಾಟಕ ಕಿಸಾನ್ ಜಾಗೃತಿ ಸಂಘದಿಂದ ನಗರದ ಚರ್ಚ್ ಕಾಂಪ್ಲೆಕ್ಸ್ ನಲ್ಲಿರುವ ಕರ್ನಾಟಕ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಾಮಾಜಿಕ ಹೋರಾಟಗಾರರಾದ ಎಸ್.ಎ ಖಾದ್ರಿ ಜಿಲ್ಲೆಯ ಕೇಂದ್ರ ಸ್ಥಾನ ವಾಗಿರುವುದರಿಂದ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಡಬೇಕಾಗಿತ್ತು. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಹಲವಾರು ಸಂಘಟನೆಗಳೊಂದಿಗೆ ಜಿಲ್ಲೆಗೆ ಬಂದು ಕರೆ ಕೊಟ್ಟು ಪ್ರತಿಭಟಿಸ ಲಾಗುವುದು ಎಂದರು.

ವಿಜಯನಗರ ಕ್ಷೇತ್ರದ ಜನರು ಶಾಸಕ ಗವಿಯಪ್ಪ ನವರನ್ನು ಜನಗಳು 39,966 ಬಹುಮತ ಗಳಿಂದ ಗೆಲ್ಲಿಸಿದ್ದಾರೆ. ಅವರಿಗೆಲ್ಲಾ ಅನ್ಯಾಯ ಮಾಡುತ್ತಿದ್ದೀರಿ. ಈ ತಾಲೂಕಿಗೆ ಹೆಚ್ಚಿನ ಅನುದಾನ ಏನಾದರೂ ಕೊಡದೆ ಹೋದರೆ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟವನ್ನು ಹಮ್ಮಿ ಕೊಳ್ಳಲಾಗುವುದು ಎಂದು ಅಸಮಾಧಾನ ಹೊರ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಜಮೀರ್ ಖಾನ್ ರವರು ಉಸ್ತುವಾರಿ ವಹಿಸಿ ಕೊಂಡಾಗಿನಿಂದಲೂ ಎರಡು ತಿಂಗಳಿಗೆ ಮೂರು ತಿಂಗಳಿಗೊಮ್ಮೆ ಕ್ಷೇತ್ರಕ್ಕೆ ಬರುತ್ತಿದ್ದು ಕೇವಲ ಸರ್ಕಾರಿ ಕಾರ್ಯಕ್ರಮಗಳಾದ ಉತ್ಸವಗಳಲ್ಲಿ ಭಾಗಿಯಾಗಲು ಮಾತ್ರ ಸೀಮಿತವಾಗಿದ್ದಾರೆ. ಜನರ ಸಮಸ್ಯೆಯನ್ನು ಒಂದು ದಿನಕ್ಕೂ ಆಲಿಸಿಲ್ಲ ಇದರಿಂದ ಸಾರ್ವಜನಿಕರು ಬೇಸತ್ತಿದ್ದಾರೆ. ಕೂಡಲೇ ನೀವೇ ಮುಂದೆ ನಿಂತು ಜಿಲ್ಲೆಗೆ ಮತ್ತು ತಾಲೂಕಿಗೆ ಹೆಚ್ಚಿನ ಅನುದಾನವನ್ನು ತರಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿಮ್ಮ ಕಾರನ್ನು ಜಿಲ್ಲೆಯ ಗಡಿ ಭಾಗದಲ್ಲೇ ನಿಲ್ಲಿಸಿ ಹೊರ ಹಾಕುವ ಪ್ರಸಂಗ ನಡೆಯುತ್ತದೆ ಎಂದು ಎಚ್ಚರಿಸುತ್ತಾ. ತಪ್ಪಿದ್ದಲ್ಲಿ ಸರ್ಕಾರ ಜಿಲ್ಲೆಯ ಉಸ್ತುವಾರಿಯನ್ನು ವಾಪಸ್ ಪಡೆಯುವುದು ಮೇಲು. ಪಕ್ಕದ ಜಿಲ್ಲೆಯವರಿಗೆ ಆ ಸ್ಥಾನವನ್ನು ಕೊಟ್ಟು ಅಭಿವೃದ್ಧಿಗೆ ಹೊತ್ತು ಕೊಡಬೇಕು ಎಂದ ಆಗ್ರಹಿಸಿರು.

ಅಖಿಲ ಕರ್ನಾಟಕ ಕಿಸಾನ್ ಜಾಗೃತಿ ಸಂಘದ ರಾಜ್ಯ ಸಂಘಟನಾ ಕಾರ್ಯಧ್ಯಕ್ಷರಾದ ಗಂಗಾಧರ ಮಾತನಾಡಿ ನೂತನವಾಗಿ ರಚನೆಯಾಗಿರುವ ವಿಜಯನಗರ ಜಿಲ್ಲೆಯ ಅಭಿವೃದ್ಧಿಗೆ ಕೇವಲ 22 ಕೋಟಿ ಕೊಟ್ಟಿದ್ದಾರೆ ಎಂದರೆ ಇಲ್ಲಿ ದೊಡ್ಡ ಲೋಪವಾಗಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ತಮ್ಮ ಕೆಲಸಗಳಿಗಾಗಿ ಜನ ಕೇಂದ್ರ ಸ್ಥಾನಕ್ಕೆ ಬರುತ್ತಾರೆ. ಹಾಗಾಗಿ ಹೆಚ್ಚಿನ ಅಭಿವೃದ್ಧಿಯ ಅಗತ್ಯತೆ ಇದೆ. ಸ್ವಪಕ್ಷದ ಶಾಸಕರ ಜಿಲ್ಲೆಗೆ ಅಭಿವೃದ್ಧಿಗಾಗಿ ಇಷ್ಟು ಕಡಿಮೆ ಅನುದಾನ ಕೊಟ್ಟ–ರೆ ಅಭಿವೃದ್ಧಿ ಮಾಡಲು ಹೇಗೆ ಸಾಧ್ಯವಾಗುತ್ತದೆ. ಜನರು ಕಾಂಗ್ರೆಸ್ ಅನ್ನು ನಂಬಿ ಓಟು ಕೊಟ್ಟಿದ್ದಾರೆ ಆದರೆ ಸರ್ಕಾರದಿಂದ ಇಂದು ಜಿಲ್ಲೆಗೆ ತುಂಬಾ ಅನ್ಯಾಯವಾಗುತ್ತಿದೆ

ಸಕ್ಕರೆ ಕಾರ್ಖಾನೆಗಾಗಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದೇವೆ ಮಾಡುತ್ತೇವೆ ಎಂದು ಹೇಳಿ ಇಷ್ಟು ಕಡಿಮೆ ಹಣ ಕೊಟ್ಟಿದ್ದಾರೆ. ಇನ್ನು ಸಕ್ಕರೆ ಕಾರ್ಖಾನೆ ಮಾಡಲು ಸಾಧ್ಯವಾ ಎನ್ನುವಂತ ಪ್ರಶ್ನೆ ನಮ್ಮಲ್ಲಿ ಕಾಡುತ್ತದೆ. ಈ ಸರ್ಕಾರ ರೈತರ ಪರವಾಗಿ ನಿಲ್ಲುತ್ತದೆ ಎನ್ನುವ ಗ್ಯಾರಂಟಿ ಏನು? ಜಿಲ್ಲೆ ಅಭಿವೃದ್ಧಿಗಾಗಿ 100 ರಿಂದ 150 ಕೋಟಿ ಅವಶ್ಯಕತೆ ಇದೆ ಇನ್ನೂ ಹಲವಾರು ಕಚೇರಿಗಳ ಕಟ್ಟಡ ಕಟ್ಟಲು ಬಾಕಿ ಇದೆ ಸರ್ಕಾರ ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನವನ್ನು ನೀಡಬೇಕು ಇಲ್ಲದೆ ಹೋದರೆ ಹೊಸಪೇಟೆಗೆ ಬಂದ್ ಕರೆ ಕೊಡಲಾಗುವುದು ಎಂದು ಎಚ್ಚರಿಸಿದರು.

ಸುದ್ದಿ ಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಕಿಸಾನ್ ಜಾಗೃತಿ ಸಂಘದ ಎಂ.ರತ್ನ ಜಿಲ್ಲಾಧ್ಯಕ್ಷರು ಮಹಿಳಾ ಘಟಕ, ಎಂ ದ್ಯಾಮಪ್ಪ ಹೊಸಪೇಟೆ ತಾಲೂಕು ಅಧ್ಯಕ್ಷರು , ಗಾದಿ ಲಿಂಗಪ್ಪ, ಶಿವಪ್ಪ, ನೀಲಪ್ಪ ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಶರಣರ ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

**ಬನಹಟ್ಟಿ** : ಶರಣರ ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ. ಕುಲ ಕಸುಬಿನ ಮಹತ್ವ ಅರಿತುಕೊಳ್ಳಿ. ಅದರ ಬಗ್ಗೆ ಕೀಳರಿಮೆ ಬೇಡ. ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ. ಶಿಕ್ಷಣದ ಜೊತೆ ಕುಲದ ಕಲೆಯನ್ನು ಮರೆಯಬಾರದು ಎಂದು ರಾಮಪೂರದ ಶರಣರಾದ ಶಿವಾನಂದ ಭಸ್ಮೆ ಮಹಾರಾಜರು ಹೇಳಿದರು.




ಅವರು ಶುಕ್ರವಾರ ಬನಹಟ್ಟಿ ನಗರದಲ್ಲಿ ಮೇದಾರ ಕೇತೇಶ್ವರ ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಮ್ಮಿಕೊಂಡ ಶಿವಶರಣ ಮೇದಾರ ಕೇತೇಶ್ವರ 894 ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೇಧಾರ ಕೇತೇಶ್ವರರು ಬಸವಾದಿ ಪ್ರಮಥರ ಅನುಯಾಯಿ. ಕಾಯಕವೇ ಕೈಲಾಸ ಎಂದು ತಿಳಿದು ಬದುಕಿದವರು. ಅವರ ಆದರ್ಶ ನಮಗೆ ದಾರಿ ದೀಪವಾಗಬೇಕು. ವರ್ಷಕ್ಕೆ ಒಮ್ಮೆ ಕಾರ್ಯಕ್ರಮ ಮಾಡುವುದರ ಬದಲು ಪೂರ್ತಿ ತಿಂಗಳು ಕಾರ್ಯಕ್ರಮ ಹಮ್ಮಿಕೊಳ್ಳಿ. ಕಾಯಕ ಜಾತಿ ಸೂಚಕವಲ್ಲ ಎಂದರು.

ಬಸವಣ್ಣನವರ ಸಮಕಾಲೀನ ಶರಣ, ಅನುಭಾವಿ, ಶುದ್ಧ ಕಾಯಕಜೀವಿ, ಜಂಗಮ, ನಿತ್ಯ ದಾಸೋಹಿ, ಸದ್ಭಕ್ತ, ನಿಷ್ಠೆಯಿಂದ ಕೂಡಿದ ಆಚಾರವಂತ. ವೀರ ಮಾಹೇಶ್ವರ, ಪ್ರಸಾದಿ, ಸರ್ವಾಂಗ ಲಿಂಗಿ, ಪ್ರಾಣಲಿಂಗಿ, ಸಚ್ಚಾರಿತ್ರ್ಯವುಳ್ಳಾತ. ತನು–ಮನ–ಧನಗಳನ್ನು ಜಂಗಮಕ್ಕೆ ಅರ್ಪಿಸಿದವರು. ಐಕ್ಯ ಸ್ಥಳವನ್ನು ಮೆಟ್ಟಿ ನಿಂತವರು. ವಚನಗಳಲ್ಲಿ ಶಿವಾನುಭವ ತತ್ವಗಳನ್ನು ನಿರೂಪಿಸಿದ ಶ್ರೇಷ್ಠ ಶಿವಾನುಭಾವಿಯಾದವರು ಕೇತಯ್ಯ ಎಂದು ಹೇಳಿದರು.

ವಕೀಲರಾದ ರವಿ ಕಾಮಗೊಂಡ ಮಾತನಾಡಿ, ಶಿವಶರಣರ ಮಾರ್ಗದರ್ಶನ, ತತ್ವ ಹಾಗೂ ಅವರ ಬದುಕು ಪ್ರತಿಯೊಬ್ಬರಿಗೂ ಆದರ್ಶವಾಗಬೇಕು. ಅವರ ವಚನಗಳು ನಮಗೆ ದಾರಿ ದೀಪವಾಗಿವೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ ನಾಳಿನ ಸತ್ಪ್ರಜೆಗಳನ್ನಾಗಿಸಿ, ಬಸವಾದಿ ಶರಣರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ನಡೆದು ನಮ್ಮ ಜೀವನ ಸುಂದರವಾಗಿಸಿಕೊಳ್ಳೋಣ ಎಂದರು.

ನಿವೃತ್ತ ಶಿಕ್ಷಕ ಎಸ್. ಬಿ. ಪಾಟೀಲ ಮಾತನಾಡಿದರು.

ಸಮಾರಂಭದಲ್ಲಿ ಬಸವರಾಜ ಘಂಟಿ ಸ್ವಾಮೀಜಿ, ಮಹೇಶ ಬಂಡಿಗಣಿ, ಪ್ರಕಾಶ ಬುರುಡ, ದುಂಡಪ್ಪ ಬುರುಡ, ರಾಜು ಬುರುಡ, ಪ್ರಕಾಶ ಮೇದಾರ, ಅನೀಲ ಬುರುಡ, ಮುತ್ತು ಬುರುಡ, ಸಾಗರ ಬುರುಡ, ಶಿವು ಬುರುಡ, ಹನಮಂತ ಬುರುಡ, ಕಾಡಪ್ಪ ಬುರುಡ, ಮಂಜುನಾಥ ಬುರುಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ತಾಯಿ ಜೀವಂತ ದೇವರು



**ಬನಹಟ್ಟಿ** : ತಾಯಿಯ ಋಣ ಶ್ರೇಷ್ಠವಾದುದು. ಆದನ್ನು ತೀರಿಸಲು ಸಾಧ್ಯವಿಲ್ಲ. ದೇವಿಯನ್ನು ದೇವಸ್ಥಾನದಲ್ಲಿ ಆರಾಧಿಸುವುದಕ್ಕಿಂತ ಮನೆಯಲ್ಲಿ ತಾಯಿ ಸೇವೆ ಮಾಡುವುದು ಮುಖ್ಯವಾಗಿದೆ. ತಾಯಿ ಜೀವಂತ ದೇವರು. ಅವಳನ್ನು ನಾವು ಗೌರವಿಸಬೇಕು. ದಿನನಿತ್ಯ ದೇವಿಯನ್ನು ಆರಾಧಿಸಿದರೆ ಅವಳು ತನ್ನ ಭಕ್ತರಿಗೆ ಆಯುರಾರೋಗ್ಯ ಕರುಣಿಸುತ್ತಾಳೆ ಎಂದು ಜೋಡುಕುರಳಿಯ ಸಿದ್ಧಾರೂಢ ಮಠದ ಚಿದ್ಘಾನಾನಂದ ಭಾರತಿ ಸ್ವಾಮೀಜಿ ಹೇಳಿದರು.

ಅವರು ಇತ್ತೀಚೆಗೆ ಬನಹಟ್ಟಿಯ ಅಕ್ಕಲಕೋಟ ಶರಣರು ಸ್ಥಾಪಿಸಿದ ಸಿದ್ಧಾರೂಢ ಮಠದಲ್ಲಿ ಆದಿಶಕ್ತಿ ರಾಜರಾಜೇಶ್ವರಿ ಮೂರ್ತಿಯ ಪ್ರತಿಷ್ಠಾಪನೆಯ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮೈದರಗಿಯ ಶಿವಶರಣ ಮಠದ ಅಭಿನವ ರೇವಣಸಿದ್ಧ ಶರಣರು ಮಾತನಾಡಿ, ಪ್ರತಿಯೊಬ್ಬರೂ ಭಕ್ತಿಯಿಂದ ನಡೆದುಕೊಳ್ಳಬೇಕು. ಭಕ್ತಿಗೆ ಪವಿತ್ರವಾದ ಮನಸ್ಸು ಬೇಕು. ಧಾರ್ಮಿಕ ಹಾಗೂ ನೀತಿಯುಕ್ತ ಕಾರ್ಯಕ್ರಮಗಳಿಗೆ ಸಹಾಯ ಸಹಕಾರ ಮಾಡುವುದರಿಂದ ಜೀವನದಲ್ಲಿ ಪುಣ್ಯ ಪ್ರಾಪ್ತಿಯಾಗುತ್ತದೆ. ಶುದ್ಧ ಭಾವದಿಂದ ಉತ್ತಮ ಭಾಗ್ಯವನ್ನು ಪಡೆದುಕೊಳ್ಳಬಹುದು ಎಂದರು.

ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಮಾಜದ ಗುರುಗಳಾದ ಅಗ್ರಾಣೆಪ್ಪ ಬುದ್ನಿ ಮಾತನಾಡಿದರು.

ಈ ಸಂದರ್ಭದಲ್ಲಿ ನೂರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಿತು.

ವಿರುಪಾಕ್ಷಪ್ಪ ಕೊಕಟನೂರ, ರಾಮಣ್ಣ ಭದ್ರನ್ನವರ, ಶಂಕರ ಜಾಲಿಗಿಡದ, ರಮೇಶ ಕೊಣ್ಣೂರ, ರವಿ ಕೊಣ್ಣೂರ, ವೈ. ಬಿ. ಕೊರಡೂರ, ರಮೇಶ ಸೋರಗಾಂವಿ, ಪ್ರಕಾಶ ಬುರುಡ, ಬಸವರಾಜ ಸುಲ್ತಾನಪುರ, ಶೈಲಜಾ ನುಚ್ಚಿ, ಮಹಾನಂದಾ ಕುಳ್ಳಿ, ಉಮಾ ಬಡೇಮಿ, ಮಹಾದೇವಿ ಸುಟ್ಟಟ್ಟಿ, ಶಾಂತಾ ಸೋರಗಾಂವಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

### ವಿಠ್ಠಲ–ರುಕ್ಮೀಣಿ ಸಪ್ತಾಹ ಜಾತ್ರೆ

## ಸಂಭ್ರಮದಿಂದ ಜರುಗಿದ ರಥೋತ್ಸವ

**ಮಹಾಲಿಂಗಪುರ** : ಪಟ್ಟಣದ ಬುದ್ನಿಪಿಡಿ ಬಡಾವಣೆಯ ಭಾವಿಯಲ್ಲಿರುವ ವಿಠ್ಠಲ–ರುಕ್ಮೀಣಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಗೌರಿ ಹುಣ್ಣಿಮೆ ಜಾತ್ರಾ ಮಹೋತ್ಸವ ನಿಮಿತ್ಯ ಶುಕ್ರವಾರ ಸಂಜೆ 7ಕ್ಕೆ ರಥೋತ್ಸವವು ಅಪಾರ ಭಕ್ತರ ಮಧ್ಯೆ ಸಂಭ್ರಮದಿಂದ ಜರುಗಿತು.





ಜಾತ್ರೆಯ ನಿಮಿತ್ಯ ಶುಕ್ರವಾರ ಮುಂಜಾನೆ 8 ಗಂಟೆಗೆ ಕಾಕಡಾರತಿ, 8 ಗಂಟೆಗೆ ಶ್ರೀಹರಿ ವಿಠ್ಠಲನ ಸೋಹಳಾ ದಿಂಡಿ ನಗರ ಪ್ರದಕ್ಷಣೆ ಹಾಗೂ ಭಾರುಡ ಕಾರ್ಯಕ್ರಮಗಳ ಮೆರವಣಿಗೆ ನಡೆಯಿತು. ಮಧ್ಯಾಹ್ನ 1 ಗಂಟೆಯಿಂದ ಸಂಜೆವರೆಗೆ ಸಾವಿರಾರು ಭಕ್ತರು ಮಹಾಪ್ರಸಾದ ಸ್ವೀಕರಿಸಿದರು.

ರಾತ್ರಿ 7ಕ್ಕೆ ಮಹಾಲಿಂಗೇಶ್ವರ ಶ್ರೀಮಠದ ಈಶ್ವರ ಮಠದ ಅವರು ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಅಪಾರ ಭಕ್ತ ಸಮೂಹದ ಮಧ್ಯೆ ರಥೋತ್ಸವವು ವಿಠ್ಠಲ–ರುಕ್ಮೀಣಿ ದೇವಸ್ಥಾನದಿಂದ ಬುದ್ನಿಪಿಡಿ ಬಡಾವಣೆಯ ಹನುಮಾನ ದೇವಸ್ಥಾನದವರೆಗೆ ಅದ್ದೂರಿಯಾಗಿ ನಡೆಯಿತು.

ರಥೋತ್ಸವದ ಮುಂದೆ ಗೊಂಬೆ ಕುಣಿತ, ಕರಡಿ ಕಲಾವಿದರ ಕರಡಿಮಜಲು, ಮಹಾಲಿಂಗೇಶ್ವರ ಮಠದ ಗೋವು, ನಂದಿಕೋಲು, ಕಂಡ್ಯಾಳ ಬಾಸಿಂಗಗಳು ವಿಠ್ಠಲ ರುಕ್ಮೀಣಿ ರಥೋತ್ಸವಕ್ಕೆ ಕಳೆಕಟ್ಟಿದ್ದವು. ಭಕ್ತರು ರಥಕ್ಕೆ ಹೂವು, ಹಣ್ಣು, ಉತ್ತತ್ತಿ, ಬೆಂಡು, ಬೆತ್ತಾಸ ಹಾರಿಸಿ ಜಯ ಜಯ ವಿಠ್ಠಲ ಪಾಂಡುರಂಗ ವಿಠ್ಠಲ ಜಯಘೋಷಗಳನ್ನು ಹಾಕುತ್ತಾ ರಥವನ್ನು ಎಳೆದರು.

ರಾತ್ರಿ 7ರಿಂದ ತಡರಾತ್ರಿವರೆಗೆ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ದೇವಸ್ಥಾನದ ಹಿರಿಯರಾದ ಕೃಷ್ಣಗೌಡ ಪಾಟೀಲ, ರವಿಗೌಡ ಪಾಟೀಲ, ಮೌನೇಶ ಬಡಿಗೇರ, ವಿಠ್ಠಲಗೌಡ ಬ.ಪಾಟೀಲ, ಮಲ್ಲಪ್ಪ ಅಂಬಣ್ಣನ್ನಗೋಳ, ಸದಾಶಿವ ಶೇಗುಣಸಿ, ಬೇಬವ್ವ ಯಾದವಾಡ, ಕಲಾವತಿ ಯಾದವಾಡ, ಬಸಯ್ಯ ಮಠಪತಿ, ಮೌನೇಶ ಬಡಿಗೇರ, ಶಂಕರಗೌಡ ಪಾಟೀಲ, ಹಣಮಂತ ಬಡಿಗೇರ, ಕುಮಾರ ಪವಾರ, ರಾಮಣ್ಣ ಸಂಶಿ, ಮಲ್ಲಿಕಾರ್ಜುನ ಸಂಶಿ, ರಾಮಗೋಪಾಲಭಟ್ಟರು, ಮಹಾಲಿಂಗಪ್ಪ ತಟ್ಟಿಮನಿ, ಮಹಾಲಿಂಗ ಭೀ. ಪಾಟೀಲ, ವಿಜುಗೌಡ ಪಾಟೀಲ, ಸುನೀಲಗೌಡ ಪಾಟೀಲ, ನಾರಾಯಣಗೌಡ ಪಾಟೀಲ, ವಿಷ್ಣುಗೌಡ ಪಾಟೀಲ, ಶ್ರೀಶೈಲಪ್ಪ ರೊಡ್ಡನ್ನವರ, ರಾಜು ಮುದಕಪ್ಪಗೋಳ ಸೇರಿದಂತೆ ಹಲವರು ಜಾತ್ರೆಯನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದರು.

ಇಂದು ಕಳಸಾರೋಹನ : ಶನಿವಾರ ಮಧ್ಯಾಹ್ನ 1ಕ್ಕೆ ಭಕ್ತರಿಗೆ ಮಹಾಪ್ರಸಾದ, ಸಂಜೆ 4ಕ್ಕೆ ಕಳಸಾರೋಹನದೊಂದಿಗೆ ಐದು ದಿನಗಳ ಗೌರಿಹುಣ್ಣಿಮೆಯ ಜಾತ್ರಾ ಮಹೋತ್ಸವವು ಮುಕ್ತಾಯಗೊಳ್ಳಲಿದೆ.



ರಬಕವಿ ಬನಹಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜವಾಹರಲಾಲ ನೆಹರು ಅವರ ಜಯಂತ್ಯೋತ್ಸವದ ಅಂಗವಾಗಿ ಪ್ರಾಚಾರ್ಯ ಚೇತನ ಡಾಗಾ ಹಾಗೂ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪೂಜೆ ಸಲ್ಲಿಸಿದರು. ಎಸ್. ಆರ್. ಹಂದಿಗುಂದ, ಮಹಾಂತೇಶ ರೆಡ್ಡೆರಟ್ಟಿ, ದೀಪಾ ಜಾಗೀರದಾರ, ರಾಜಶೇಖರ ಬೀಳಗಿ, ಸಂಗಮೇಶ ಗುಟ್ಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# 15ನೇ ಅಂತರ ತೋಟಗಾರಿಕೆ ಮಹಾವಿದ್ಯಾಲಯಗಳ ಯುವಜನೋತ್ಸವ 2024-25



**ಮೂಡಲಗಿ :** ಬೀದರನಲ್ಲಿ ನಡೆದ 15 ನೇ ಅಂತರ ತೋಟಗಾರಿಕೆ ಮಹಾವಿದ್ಯಾಲಯಗಳ ಯುವಜನೋತ್ಸವ –2024 ರ ಕಾರ್ಯಕ್ರಮವು 2024 ಅಕ್ಟೋಬರ್ 7, 8 ಮತ್ತು 9 ರಂದು ನಡೆಯಿತು. ಈ ಯುವ ಜನೋತ್ಸವದಲ್ಲಿ ಸಮೀಪದ ಅರಭಾಯ ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡರು ಹಾಗೂ ಮಹಾವಿದ್ಯಾಲಯವು ರನ್ನರ್ಸ ಅಫ್ ಆಗಿ ಹೊರಹೊಮ್ಮಿತು.

ಲಘು ಗಾಯನದಲ್ಲಿ ದ್ವಿತೀಯ.ಜಾನಪದದಲ್ಲಿ ತೃತೀಯ. ಏಕಾಂಕ ನಾಟಕದಲ್ಲಿ ತೃತೀಯ. ಮೈಮನಲಿ ಪ್ರಥಮ.ಏಕಪಾತ್ರದಲ್ಲಿ ಪ್ರಥಮ.ಸ್ಕೀಟ್‌ನಲ್ಲಿ ಪ್ರಥಮ.ಸ್ಥಳದಲ್ಲೇ ಚಿತ್ರ ಬಿಡುವದರಲ್ಲಿ ದ್ವಿತೀಯ.ಪ್ರೋಸ್ಟರ್ ತಯಾರಿಕೆಯಲ್ಲಿ ತೃತೀಯ.

ಕಾರ್ಟೂನಿಂಗನಲ್ಲಿ ಪ್ರಥಮ.ತೇಪ ಚಿತ್ರಗಾರಿಕೆಯಲ್ಲಿ ದ್ವಿತೀಯ. ರಸಪ್ರಶ್ನೆಯಲ್ಲಿ ಪ್ರಥಮ,ಎಕ್ಸ್ಟೆಂಪರನಲ್ಲಿ ತೃತೀಯ.ಎಲೋಕೆಷನಲ್ಲಿ ಚತುರ್ಥ. ಕಿತ್ತೂರು ರಾಣಿ ಚನ್ನಮ್ಮಾ ತೋಟಗಾರಿಕಾ ಮಹಾವಿದ್ಯಾಲಯ, ಅರಭಾವಿಯ ಡೀನ್ ಡಾ. ಎಮ್. ಜಿ. ಕೆರುಟಗಿ ರವರು ಯುವಜನೋತ್ಸವದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಮತ್ತು ತಂಡದ ವ್ಯವಸ್ಥಾಪಕ ಡಾ. ದೀಲಿಪಕುಮಾರ ಮಸೂತಿ, ಡಾ. ಪ್ರತೀಕ್ಷಾ ಮತ್ತು ಡಾ. ರಾಘವೇಂದ್ರ ಕೆ.ಎಸ್. ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.




**ಮೂಡಲಗಿ : ಅಯೋಧ್ಯಾ ಬಲಿದಾನ ದಿವಸ ನಿಮಿತ್ಯವಾಗಿ ಮೂಡಲಗಿಯ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವಿಶ್ವ ಹಿಂದು ಪರಿಷತ ಬಜರಂಗ ದಳದ ವತಿಯಿಂದ ರಕ್ತದಾನ ಶಿಬಿರ ನಡೆಯಿತು ಸುಮಾರು 85 ಜನ ಕಾರ್ಯಕರ್ತರು ರಕ್ತದಾನ ಮಾಡಿದರು ಈ ಸಂದರ್ಭದಲ್ಲಿ ವಿಶ್ವ ಹಿಂದೂಪರಿಷತಿನ ಪ್ರಾಂತ ಸತ್ಸಂಗ ಪ್ರಮುಖ ನಾರಾಯಣ ಮಠಾಧಿಕಾರಿ , ಜಿಲ್ಲಾ ಸಹ ಕಾರ್ಯದರ್ಶಿ ದಯಾನಂದ ಸವದಿ,ಜಿಲ್ಲಾ ಗೋರಕ್ಷಾ ಪ್ರಮುಖ ಲಕ್ಕಪ ನಂದಿ ತಾಲುಕಾ ಅಧ್ಯಕ್ಷ ಶಿವಶಂಕರ ಖಾನಾಪುರ ತಾಲುಕ ಬಜರಂಗದಳ ಸಂಯೋಜಕ ಶ್ರೀಧರ ಬಡಿಗೇರ ತಾಲೂಕಾ ಬಲೋಪಾಸನ ಪ್ರಮುಖ ಭೀಮಪ್ಪ ಪೂಜೇರಿ ಗೋ ರಕ್ಷಾ ಪ್ರಮುಖ ದುಂಡಪಾ ಹಳ್ಳೂರ ನಗರ ಸಂಯೋಜಕ ರಾಮಚಂದ್ರ ಪಾಟೀಲ ವಿದ್ಯಾರ್ಥಿ ಪ್ರಮುಖ ಎಲ್ಲೇಶ ಬಜಂತ್ರಿ ಮಹಾಂತೇಶ ಮುಗಳಖೋಡ ಮಾರುತಿ ಜಾಧವ ಮಾಲತಿ ಆಶ್ರೀತ ಸೇರಿದಂತೆ ವಿಶ್ವ ಹಿಂದೂಪರಿಷತಿನ ಎಲ್ಲ ಪದಾಧಿಖಾರಿಗಳು ಇದ್ದರು**

# ಚಿಮ್ಮಡಕ್ಕೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭೇಟಿ ಪರಿಶೀಲನೆ

**ಮಹಾಲಿಂಗಪುರ :** ಬಾಗಲಕೋಟೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಹಲವು ಅಧಿಕಾರಿಗಳ ತಂಡದೊಂದಿಗೆ ಚಿಮ್ಮಡ ಗ್ರಾಮಕ್ಕೆ ಭೇಟಿ ನೀಡಿ ಹಲವು ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದಾಗ ಇಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿದ್ದರೂ ಸ್ಟಾಪ್ ನರ್ಸ ಸಿಬ್ಬಂದಿ ಕೊರತೆಯಿಂದ ಇಲ್ಲಿನ ಬಡ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗುತಿದ್ದು ಕೂಡಲೆ ಆಸ್ಪತ್ರೆಗೆ ನರ್ಸ ನೇಮಕಗೊಳಿಸುವಂತೆ ಗ್ರಾಮಸ್ಥರು ಅಧಿಕಾರಿಗಳಲ್ಲಿ ಮನವಿ ಮಾಡಿದರು. ಈ ಕುರಿತು ಸಂಭದಿಸಿದ ಆಧಿಕಾರಿಗಳಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



ಅನುದಾನ ಬಿಡುಗಡೆಯಾಗದೆ ಸ್ಥಗಿತಗೊಂಡಿರುವ ಸಂಜೀವಿನಿ ಸೆಡ್ ಕಾಮಗಾರಿಗೆ ಅವಶ್ಯವಿರುವ ಅನುದಾನ ಬಿಡುಗಡೆಗೊಳಿಸುವುದಾಗಿ ತಿಳಿಸಿದರು. ಗ್ರಾಮದಲ್ಲಿ ಕುಂಟಿತ್ತಾ ಸಾಗಿರುವ ಜಲ್ ಜೀವನ್ ಮಿಷನ್ (ಜೆ.ಜೆ.ಎಂ) ಕಾಮಗಾರಿಯ ಟ್ಯಾಂಕ್ ಹಾಗೂ ಸಂಪು ಇರುವ ಸ್ಥಳಕ್ಕೆ ಭೇಟಿನೀಡಿ ಜೆ.ಜೆ.ಎಂ ಕಾಮಗಾರಿ ಈಗಾಗಲೇ ತುಂಬಾ ತಡವಾಗಿದ್ದು ಕೂಡಲೆ ಮುಕ್ತಾಯಗೊಳಿಸಬೇಕೆಂದು ಗುತ್ತಿಗೆದಾರರಿಗೆ ಮತ್ತು ಅಧಿಕಾರಿಗಳಿಗೆ ಆದೇಶ ನೀಡಿದರು.

ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶೀಧರ ಕುರೇರರೊಂದಿಗೆ ರಬಕವಿ–ಬನಹಟ್ಟಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪಾ ಪಟ್ಟಿಹಾಳ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜೆ.ಪಿ.ಶೆಟ್ಟಿ, ವಿಭಾಗಾಧಿಕಾರಿ ಸುರೇಶ ಪಂಚಾಳ ಆಗಮಿಸಿದ್ದರು.

ಗುರಲಿಂಗಪ್ಪಾ ಪೂಜಾರಿ, ಪ್ರಭು ಮುಧೋಳ, ಅಶೋಕ ಮೋಟಗಿ, ಗ್ರಾಪಂ ಸದಸ್ಯರಾದ ನಾಗಪ್ಪಾ ಆಲಕನೂರ ಅರುಣ ಗಾಣಿಗೇರ, ಹಣಮಂತ ಬಜಂತ್ರಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ, ವೈದ್ಯಾಧಿಕಾರಿ ಡಾ.ಕೆ.ಎಸ್.ತಳ್ಳಿ ಸೇರಿದಂತೆ ಹಲವರು ಇದ್ದರು.

# ಬಸವೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

**ಮೂಡಲಗಿ :** ಗೋಕಾಕ ಮತ್ತು ಮೂಡಲಗಿ ತಾಲೂಕಿನಲ್ಲಿ ಅತ್ಯಂತ ದೊಡ್ಡ ಗ್ರಾಮವಾಗಿದ್ದು, ಕಲ್ಲೋಳಿ ಇಂದು ಪಟ್ಟಣವಾಗಿ ಬೆಳೆದು ನಿಂತಿದೆ. ಈ ಪಟ್ಟಣಕ್ಕೆ ಬೇಕಾದ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಜವಾಬ್ದಾರಿ ಎಲ್ಲ ಚುನಾಯಿತ ಪ್ರತಿನಿಧಿಗಳ ಮೇಲಿದೆ ಅದರ ಭಾಗವಾಗಿ ಪಟ್ಟಣದ ಸಾಂಸ್ಕೃತಿಕ, ಸಾಮಾಜಿಕ, ವೈವಾಹಿಕ, ಇನ್ನಿತರ ಚಟುವಟಿಕೆಗೆ ಉಪಯೋಗಿಸಿಕೊಳ್ಳಲು ಒಂದು ಸುಸಜ್ಜಿತವಾದ ಸಮುದಾಯ ಭವನದ ಅವಶ್ಯಕತೆಯನ್ನು ಮನಗಂಡು ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಲ್ಲಿ ನೂತನ ಸಮುದಾಯ ಭವನ ನಿರ್ಮಾಣಕ್ಕೆ ಅಡಿಗಲ್ಲು ನೆರವೇರಿಸಲಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಗುರುವಾರ ಕಲ್ಲೋಳಿ ಪಟ್ಟಣದ ಶ್ರೀ ಬಸವೇಶ್ವರ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.



ಪಟ್ಟಣದ ಯುವಕರಿಗೆ ಅವಶ್ಯಕತೆ ಇರುವ ಗರಡಿ ಮನೆ, ಯುವಕರ ಜ್ಞಾನದ ವಿಕಾಸಕ್ಕಾಗಿ ಸುಸಜ್ಜಿತವಾದ ವಾಚನಾಲಯ, ನೂತನ ಶಿಕ್ಷಣ ನೀತಿಗೆ ಅನುಗುಣವಾಗಿ ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್, ಜಿಮ್ ಸೌಲಭ್ಯ, ಶೌಚಾಲಯ ಈ ರೀತಿ ಹಲವಾರು ಸವಲತ್ತುಗಳನ್ನು ಕೊಡುವ ಮೂಲಕ ಈ ಪಟ್ಟಣದ ಶ್ರೇಯೋಭಿವೃದ್ಧಿಗಾಗಿ ಒಬ್ಬ ಸಂಸದನಾಗಿ ನನ್ನ ಕೊಡುಗೆಯನ್ನು ನೀಡಿದ್ದೇನೆ ಎಂದರಲ್ಲದೇ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿ ಪರವಾದ ಕಾರ್ಯಗಳನ್ನು ಕೈಗೊಳ್ಳಲು ಕಲ್ಲೋಳಿ ಪಟ್ಟಣದ ಎಲ್ಲ ಹಿರಿಯರು ಸಹಕಾರ ನೀಡಬೇಕೆಂದು ವಿನಂತಿಸಿದರು.

ಹಾಲುಮತದ ಮುಖಂಡರಾದ ಭೀಮಪ್ಪ ಮಾಯನ್ನವರ ಹಾಗೂ ಲಕ್ಷ್ಮಿ ದೇವಿ ದೇವಸ್ಥಾನದ ಪೂಜೇರಿ ಭೂತು ಮಾಯನ್ನವರ ಅವರು ಭೂಮಿ ಪೂಜೆ ನೆರವೇರಿಸಿದರು. ಪಟ್ಟಣದ ಹಿರಿಯರಾದ ಭೀಮಪ್ಪ ಕಡಾಡಿ ಹಾಗೂ ಬಸವಣ್ಣಿ ಗೋರೋಶಿ ಗುದ್ದಲಿ ಪೂಜೆ ನೆರವೇರಿಸಿದರು. ಮೃತ್ಯುಂಜಯ ಹಿರೇಮಠ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು.

ಪಟ್ಟಣದ ಪ್ರಮುಖರಾದ ಪರಗೌಡ ಪಾಟೀಲ, ಶಂಕರ ಬೆಳಕೂಡ, ಶಿವರುದ್ರ ಬಿ.ಪಾಟೀಲ, ಫಕೀರಪ್ಪ ಕಡಾಡಿ, ಸಿದ್ದಪ್ಪ ಖಾನಾಪೂರ, ಬಸವರಾಜ ಕಡಾಡಿ, ಪುಂಡಲಿಕ ಬ.ಪಾಟೀಲ, ಹಣಮಂತ ಬ.ಪಾಟೀಲ, ಬಸಗೊಂಡ ಪರಕನಟ್ಟಿ, ಶ್ರೀಶೈಲ ತುಪ್ಪದ, ಭೀಮರಾಯ ಕಡಾಡಿ, ಶಿವಪ್ಪ ಬಿ.ಪಾಟೀಲ, ಗೋವಿಂದ ಕಡಾಡಿ, ಬಾಳೇಶ ಕಂಕಣವಾಡಿ, ಪ್ರಭು ಕಡಾಡಿ, ಅಡಿವೆಪ್ಪ ಕುರಬೇಟ, ಶಂಕರ ಗೋರೋಶಿ, ಮಲ್ಲಪ್ಪ ಖಾನಗೌಡರ, ಜಗದೀಶ ಗೊರಗುದ್ದಿ, ಮಾರುತಿ ಹೂಗಾರ, ಪರಪ್ಪ ಮಳವಾಡ, ಸುಭಾಸ ಪೂಜೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚೇಂಜ್ ಆಗು ನೀ...




ಬದುಕೆಂಬ ಸುಂದರ ಬಿಳಿಯ ಪುಟಗಳಲ್ಲಿ ಜೀವಿತದ ಪ್ರತಿ ಕ್ಷಣವನ್ನು ರಂಗು ಗೊಳಿಸಿ ಚಿತ್ತಾರ ಮೂಡಿಸಬೇಕು. ಇರುವ ಸಮಯದಲ್ಲಿ ಮನೋ ಇಚ್ಛಾನುಸಾರ ಪರರನ್ನು ಘಾಸಿಮಾಡದೆ ಒಂದು "ಸ್ಮೈಲ್" ಜೊತೆಗೆ ಎಲ್ಲವನ್ನು ಮರೆತಂತೆ ಬದುಕಿ ಬಿಡಿ . ನೋಡಿ ! ಜೀವನವೆಂದರೆ ಸಾಕಷ್ಟು ಕಷ್ಟ ಸುಖಗಳ ನಾಟಕದ ಸನ್ನಿವೇಶಗಳಾಗಿವೆ ಎಲ್ಲಾ ಸಂಗತಿಗಳನ್ನು ಸಮವಾಗಿ ತೆಗೆದುಕೊಂಡು ಮುಂಬರುವ ಸಮಯಕ್ಕೆ ಮಹತ್ವಾಕಾಂಕ್ಷೆ ಇಟ್ಟುಕೊಳ್ಳುವುದೇ ಜೀವನ. ಬದುಕಲ್ಲಿ ವಿದ್ಯಾಭ್ಯಾಸದಲ್ಲಿ ಫೇಲ್ ಆಗಬಹುದು, ಲವ್ ಫೇಲ್ ಆಗಬಹುದು, ಮತ್ತೆ ಬ್ಯುಸಿನೆಸ್ ಫೇಲ್ ಆಗಬಹುದು ಆದರೆ ನಮ್ಮಲ್ಲಿಯ ಆತ್ಮಸ್ಥೈರ್ಯ ಎಂದಿಗೂ ಫೇಲ್ ಆಗಬಾರದು. ನಿಜ ಆ ಸಮಯದಲ್ಲಿ ನಮಗೆ ಜೀವನವೇ ಬೇಡ ನಾನು ಬದುಕಿದ್ದು ವ್ಯರ್ಥ ಎಂದೆನಿಸಬಹುದು ಜೊತೆಗೆ ಮುಂದೆ ನನಗೆ ಯಾವ ಮಾರ್ಗಗಳು ಇಲ್ಲ ಎಂದು ಕೈಚಳ್ಳಿ ಕುಳಿತುಕೊಳ್ಳಬಹುದು ಹೀಗೆ ಮಾಡಿದರೆ ನಾವು ನಿಜವಾಗಿ ಅಲ್ಲಿ ಫೇಲಾಗುತ್ತೇವೆ. ಆದ್ದರಿಂದ ಬಂದಂತಹ ಆ ಕೆಟ್ಟ ಸಮಯವನ್ನು ಬೇರೊಂದು ಕಾರ್ಯದಲ್ಲಿ ಮಗ್ನರಾಗುವ ಮೂಲಕ ಅದನ್ನು ನಾವು ಸಮತೋಲಿಸಬಹುದು, ಕೆಳಗೆ ಬಿದ್ದ ಸಂಗತಿಯಿಂದಲೇ ಬೇರೆ ಯಶಸ್ವಿ ಮಾರ್ಗದ ಶೋಧನೆ ಮಾಡಬೇಕು. ಆಗ ಜೀವನದಲ್ಲಿ ಬದಲಾವಣೆಯ ಪರ್ವ ಪ್ರಾರಂಭವಾಗುವುದು.

ಹೀಗೆ ಒಂದು ಕಥೆ ಸಾಗರ್ ಎನ್ನುವ ಯುವಕ ನೋಡಲು ತುಂಬಾ ಸುಂದರನಾಗಿದ್ದ ಆದರೆ ಏನು ಮಾಡುವುದು ವಿದ್ಯೆ ಸ್ವಲ್ಪವೂ ಅವನತ್ತ ಸುಳಿಯಲಿಲ್ಲಾ, ಮನೆಯಲ್ಲಿ ಪಾಲಕರು ಟ್ಯೂಷನ್ ಅದು ಇದು ಅಂತ ಸಾಕಷ್ಟು ಪ್ರೋತ್ಸಾಹ ಕೊಟ್ಟರು ಎಸ್ ಎಸ್ ಎಲ್ ಸಿ ಯಲ್ಲಿ ಕೇವಲ 42 ಶ್ರೇಣಿಯನ್ನು ಪಡೆದುಕೊಂಡನು , ಹಾಳಾಗಿ ಹೋಗ್ಲಿ ಅಂತ ಪಿಯು ಕಾಲೇಜಿಗೆ ಸೇರಿಸಿದರು ಅಲ್ಲಿಯೂ ಅವನಿಗೆ ಓದಲು ಇಷ್ಟವಿಲ್ಲ ಒತ್ತಾಯದ ಮೇರೆಗೆ ಕಾಲೇಜಿಗೆ ಹೋಗುತ್ತಿದ್ದ ಆಗ ಅಲ್ಲಿ ಒಬ್ಬ ಶಾಲಿತ ಎನ್ನುವಂತಹ ಹುಡುಗಿ ನೋಡಲು ತುಂಬಾ ಸುಂದರ ಹಾಗೂ ಬುದ್ಧಿವಂತಳಾಗಿದ್ದಳು, ಅವಳನ್ನು ನೋಡಿದ ಮೇಲೆ ಇವನಿಗೆ ಅವಳಲ್ಲಿ ಒಲವು ಮೂಡಿತು ಹೇಗಾದರೂ ಮಾಡಿ ಅವಳಲ್ಲಿ ತನ್ನ ಪ್ರೀತಿಯ ನಿವೇದನೆಯನ್ನು ಮಾಡಬೇಕೆಂದು ಸಾಕಷ್ಟು ಗಿಮಿಕ್ ಗಳನ್ನು ಮಾಡತೊಡಗಿದ,ಅದರಲ್ಲಿ ಒಂದು ಗ್ರಂಥಾಲಯಕ್ಕೆ ಹೋಗಿ ಓದುವ ಕೆಲಸ. ದಿನಾಲು ಶಾಲಿತಾಳು ಗ್ರಂಥಾಲಯಕ್ಕೆ ಹೋಗಿ ಅಭ್ಯಾಸವನ್ನು ಮಾಡುತ್ತಿದ್ದಳು ಅವನು ಕೂಡ ಗ್ರಂಥಾಲಯಕ್ಕೆ ಹೋಗಿ ಅವಳಿಗೋಸ್ಕರ ಕೆಲ ಪುಸ್ತಕಗಳನ್ನು ತಿರವಿ ಹಾಕುತ್ತಿದ್ದ ಹೀಗೆ ದಿನಾಲು ಗ್ರಂಥಾಲಯಕ್ಕೆ ಹೋಗುವುದು ರೂಢಿಯಾಗಿ ಅವನು ಪುಸ್ತಕ ಪ್ರೇಮಿಯಾದ. ಶಾಲಿತಾಳ ಪ್ರೀತಿಯ ಗೀಳಿಗಿಂತಲೂ, ಸಾಗರ ಪುಸ್ತಕದ ಗೀಳನ್ನು ಹೆಚ್ಚಾಗಿ ತಲೆಗೆ ಹಚ್ಚಿಕೊಂಡನು ಮುಂದೆ ಉತ್ತಮ ಓದುಗಾರನಾಗಿ ಬದಲಾ(ಚೇಂಜ್) ದನು . ಅವನ ಬುದ್ಧಿಮಟ್ಟದಲ್ಲಿ ಸಾಕಷ್ಟು ಬದಲಾವಣೆಯಾಯಿತು ಒಂದೊಮ್ಮೆ ಶಾಲಿತ ಲೈಬ್ರರಿಗೆ ಹೋಗದೆ ಇದ್ದರೂ ಕೂಡ ಸಾಗರ ಹೋಗಿ ಪುಸ್ತಕಗಳನ್ನು ಓದಿ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದ ಮುಂದೆ ಕಾಲೇಜಿನ " ಟಾಪರ್ " ಆಗಿ ಹೊರಬಂದ ಹೀಗೆ ಉತ್ತಮ ಅಧ್ಯಯನದಿಂದ ಸಾಗರನು ದೊಡ್ಡ ಆಫೀಸರ್ ಹುದ್ದೆ ಏರಿದ ಆದರೆ ಸಾಗರ್ ಈ ಹಿಂದೆ ಲೈಬ್ರರಿಗೆ ಬಂದ ಉದ್ದೇಶವೇ ಬೇರೆಯಾಗಿತ್ತು ಆದರೆ ಅವನಲ್ಲಾದ ಬದಲಾವಣೆಯು (ಚೇಂಜಸ್) ಅವನನ್ನು ಉತ್ತಮ ಜೀವನ ರೂಪಿಸಿಕೊಳ್ಳುವುದರಲ್ಲಿ ಸಹಾಯ ಮಾಡಿತು ಆ ಚೇಂಜಸ್ ಅನ್ನು ಬಳಸಿಕೊಂಡ ಸಾಗರ್ ಎಲ್ಲರಿಗೂ ಮಾದರಿ ವ್ಯಕ್ತಿಯಾದ. ಆದರೆ ಇಷ್ಟು ದೊಡ್ಡ ಗಿಫ್ಟ್ ಕೊಟ್ಟ ಶಾಲಿ ತಾಳಿಗೆ ಕೊನೆತನಕವೂ ಅವನು " ಲವ್ ಯು" ಹೇಳಲೇ ಇಲ್ಲಾ ! ಹೀಗೆ ಬದುಕಿನಲ್ಲಿ ನಮಗೆ ತಿಳಿದೋ ತಿಳಿಯದೆಯೋ ನಮ್ಮ ಓಟದ ಮಾರ್ಗವು ಚೇಂಜ್ ಆಗುವುದು ಆಗ ನಾವುಗಳು ಆ ಚೇಂಜಸ್ಗಳಿಗೆ ಹೊಂದಿಕೊಂಡು ಬದುಕು ಸಾಗಿಸಿದರೆ ಯಶಸ್ವಿ ಖಂಡಿತವಾಗಿಯೂ ದೊರೆಯುವುದು.

* * *



**ಅಶ್ವಿನಿ ಅಂಗಡಿ.**
**ಬದಾಮಿ**

# ಹನಿಟ್ರ್ಯಾಪ್



**ಇತ್ತೀಚಿನ ಭಯೋತ್ಪಾದಕ ಸುದ್ದಿಗಳು.......**

ಗೆಳೆಯರೊಬ್ಬರು ಕರೆ ಮಾಡಿ ಅಪರಿಚಿತ ಮಹಿಳೆಯ ಕೆಲವೇ ಸೆಕೆಂಡುಗಳ ಒಂದು ವಿಡಿಯೋ ಕಾಲ್ ಸಹಜವಾಗಿ ಸ್ವೀಕರಿಸಿದ ತಪ್ಪಿಗೆ ಒಂದು ಹನಿ ಟ್ರ್ಯಾಪ್ ಬ್ಲಾಕ್ ಮೇಲ್ ಗೆ ಒಳಗಾಗಿ ಸಾಕಷ್ಟು ಆತಂಕ ಭಯದವಾತಾವರಣದಲ್ಲಿನಲುಗಿಕೊನೆಗೆಅನೇಕಹಿತೈಷಿಗಳಸಹಾಯ ಪಡೆದು ಪೋಲೀಸ್ ಸ್ಟೇಷನ್ ಗೆ ದೂರು ದಾಖಲಿಸುವವರೆಗೂ ಪಟ್ಟ ಕಷ್ಟಗಳನ್ನು ಹೇಳಿಕೊಂಡರು.

ಅಂದರೆ ಕೆಲವು ತಂಡಗಳು ಈ ಹನಿ ಟ್ರ್ಯಾಪ್ ಎಂಬ ವಂಚಕ ಜಾಲವನ್ನು ವ್ಯವಸ್ಥಿತವಾಗಿ ಹೊಂದಿದೆ ಎಂಬುದು ವಾಸ್ತವ ಸಂಗತಿ. ಮನೆ ಕಳ್ಳತನ, ಸರ ಕದಿಯುವುದು, ವೇಶ್ಯಾವಾಟಿಕೆ, ಮಾದಕವಸ್ತುಗಳ ಮಾರಾಟ, ಜೂಜು ಕೇಂದ್ರಗಳು ಮುಂತಾದ ರೀತಿ ಹೊಸ ಆಧುನಿಕ ತಂತ್ರಜ್ಞಾನದ ಧಂಧೆ ಈ ಹನಿ ಟ್ರ್ಯಾಪ್.

ಬಿಪಿ, ಶುಗರ್ ರೀತಿಯಲ್ಲಿ ಇದೂ ಸಹ ಸಾಮಾನ್ಯವಾಗಿ ಹಣವಂತರು – ಜನಪ್ರಿಯರೇ ಮುಖ್ಯ ಟಾರ್ಗೆಟ್ ಆಗಿರುತ್ತಾರೆ. ಆದರೆ ಕೆಲವೊಮ್ಮೆ ಅಮಾಯಕ ಸಾಮಾನ್ಯರು ಸಹ ಇದಕ್ಕೆ ಬಲಿಯಾಗುವುದು ಇದೆ.

ಹೆಣ್ಣೊಬ್ಬಳು ನಿರ್ದಿಷ್ಟ ಗಂಡಸನ್ನು ಗುರಿಯಾಗಿಸಿ ಆಕರ್ಷಕವಾಗಿ – ಭಾವನಾತ್ಮಕವಾಗಿ – ದೈನೇಸಿಯಾಗಿ ಅಥವಾ ಬೇರೆ ಇನ್ಯಾವುದೋ ರೀತಿಯಲ್ಲಿಆಮಿಷಕ್ಕೆಒಳಪಡಿಸಿಅವರೊಂದಿಗೆಸ್ನೇಹಬೆಳೆಸಿನಂತರದಲ್ಲಿ ಅವರೊಂದಿಗೆ ದೈಹಿಕ ಸಂಬಂಧ ಬೆಳೆಸುವುದು ಅಥವಾ ಬೆಳೆಸಿದಂತೆ ನಟಿಸಿ ಅದನ್ನು ತನ್ನ ತಂಡದ ಸದಸ್ಯರು ಗುಪ್ತವಾಗಿ ಚಿತ್ರೀಕರಿಸಿ ನಂತರ ಅದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವುದಾಗಿ ಬೆದರಿಸಿ ಅವರಿಂದ ಹಣ ವಸೂಲಿ ಮಾಡುವುದೇ ಈ ಸಾಮಾನ್ಯ ಹನಿ ಟ್ರ್ಯಾಪ್. ಕೆಲವೊಮ್ಮೆ ಇತ್ತೀಚೆಗೆ ಸುಮ್ಮನೆ ವಿಡಿಯೋ ಕಾಲ್ ಮಾಡಿ ಅದನ್ನು ಸ್ವೀಕರಿಸಿದ ತಕ್ಷಣ ಆ ಕೊನೆಯಲ್ಲಿ ಹೆಣ್ಣು ಅಶ್ಲೀಲ ಭಂಗಿ ಪ್ರದರ್ಶಿಸಿ ಅದನ್ನುತಂತ್ರಜ್ಞಾನದಸಹಾಯದಿಂದಚಿತ್ರೀಕರಿಸಿನಮ್ಮದುಯಾವುದೇ ಪ್ರತಿಕ್ರಿಯೆ ಇಲ್ಲದಿದ್ದರೂ ಅದನ್ನುಸಾಮಾಜಿಕಜಾಲತಾಣಗಳಲ್ಲಿ ಪ್ರಚಾರ ಮಾಡುವುದಾಗಿ ಹೆದರಿಸುವುದು ಸಹ ನಡೆಯುತ್ತಿದೆ.

ಇಲ್ಲಿ ಬಲಾತ್ಕಾರ ಅಥವಾ ಅತ್ಯಾಚಾರದ ಲಕ್ಷಣಗಳು ಇರುವುದಿಲ್ಲ. ಇದು ಗಂಡಿನ ಆಸೆ – ದುರಾಸೆ ಅಥವಾ ವೀಕ್ ನೆಸ್ ಅನ್ನು ದುರುಪಯೋಗಿಸಿಕೊಂಡು ಹಣ ಮಾಡುವ ಒಂದು ವಂಚಕ ತಂತ್ರಗಾರಿಕೆ. ಇದು ಹೆಚ್ಚು ಕಡಿಮೆ ಒಪ್ಪಿತ ಕ್ರಿಯೆ. ಅದರ ಕ್ರಾಸ್ ಫೈರ್ ನಲ್ಲಿ ಕೆಲವೊಮ್ಮೆ ಅಮಾಯಕರ ಬಲಿ.

ಮನುಷ್ಯನ ವಂಚಕ ಇತಿಹಾಸಕ್ಕೆ ಮತ್ತೊಂದು ಮಾರ್ಗದ ಸೇರ್ಪಡೆ. ಇದರಿಂದ ಎಚ್ಚರಿಕೆ ವಹಿಸುವುದು ಹೇಗೆ ?

**ಮೊದಲನೆಯದಾಗಿ,**

ಎಂದಿನಂತೆ ಮಾನಸಿಕ ಸ್ವಯಂ ನಿಯಂತ್ರಣ ಅತ್ಯುತ್ತಮ ಪರಿಹಾರ. ನಮ್ಮೊಳಗೆ ಒಂದು ನೈಜ ಒಳ್ಳೆಯತನ ನಾವು ಇದಕ್ಕೆ ಸಿಲುಕದಂತೆ ತಡೆಯುತ್ತದೆ.

**ಎರಡನೆಯದಾಗಿ,**

ಅಪರಿಚಿತರನ್ನು ನಾವು ಆತ್ಮೀಯವಾಗಿ ಸ್ವೀಕರಿಸುವ ಮೊದಲು ಸಾಕಷ್ಟು ಮಾನಸಿಕ ಪರೀಕ್ಷೆಗೆ ಒಳಪಡಿಸಬೇಕು ಮತ್ತು ಒಂದಷ್ಟು ದೀರ್ಘ ಸಮಯ ತೆಗೆದುಕೊಳ್ಳಬೇಕು.

**ಮೂರನೆಯದಾಗಿ,**

ಕೆಲವೊಮ್ಮೆ ಎಲ್ಲಾ ಎಚ್ಚರಿಕೆಗಳ ಹೊರತಾಗಿಯೂ ಎಡವುವ ಸಾಧ್ಯತೆ ಇರುತ್ತದೆ. ಆಗ ಅದರ ಪರಿಣಾಮಗಳನ್ನು ಎದುರಿಸುವ ಧೈರ್ಯ ಪ್ರದರ್ಶಿಸಬೇಕು. ಅಂದರೆ ಅದನ್ನು ಒಪ್ಪಿಕೊಳ್ಳುವ ಮತ್ತು ಕಾನೂನಾತ್ಮಕ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕು. ತಕ್ಷಣಕ್ಕೆ ವಿಚಲಿತರಾಗಿ ವಂಚಕರ ಬಲೆಯೊಳಗೆ ಬೀಳದೆ ಅವಮಾನ ಸಹಿಸಿಕೊಂಡು ತಾಳ್ಮೆಯಿಂದ ಎದುರಿಸಬೇಕು.

**ನಾಲ್ಕನೆಯದಾಗಿ,**

ಒಂದು ವೇಳೆ ನಮ್ಮ ಯಾವ ತಪ್ಪೂ ಇಲ್ಲದೆಯೇ ವಂಚನೆಗೆ ಒಳಗಾದರೆ ಅದನ್ನು ಪೋಲೀಸರಿಗೆ ದೂರು ನೀಡಿ ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕು. ನಮ್ಮ ಒಳ್ಳೆಯ ಹಿನ್ನೆಲೆ ಇಲ್ಲಿ ಸಹಾಯಕವಾಗುತ್ತದೆ.

**ಐದನೆಯದಾಗಿ,**

ಈ ಆಧುನಿಕ ತಂತ್ರಜ್ಞಾನದ ಸಂದರ್ಭದಲ್ಲಿ ಇದೆಲ್ಲಾ ಸಹಜ ಎಂದು ಅರ್ಥಮಾಡಿಕೊಂಡು ನಿರ್ಲಕ್ಷಿಸಬೇಕು. ಇಲ್ಲದಿದ್ದರೆ ವ್ಯವಸ್ಥೆ ನಮ್ಮನ್ನೇ ಬಲಿ ಪಡೆಯುತ್ತದೆ. ಜೊತೆಗೆ ನಮ್ಮ ಸುತ್ತಮುತ್ತಲಿನ ಗೆಳೆಯರು ಸಹ ಹನಿ ಟ್ರ್ಯಾಪ್ ಬಗ್ಗೆ ಅತಿರಂಜಿತ ವರದಿಗಳನ್ನು ನಂಬದೆ ನಿರ್ಲಕ್ಷಿಸಬೇಕು.

**ಆರನೆಯದಾಗಿ,**

ಕೆಲವು ಕಚ್ಚೆ ಹರುಕು ವ್ಯಕ್ತಿಗಳು ಇದರಲ್ಲಿ ಸುಲಭವಾಗಿ ಸಿಲುಕುತ್ತಾರೆ. ಅವರ ಸ್ವಭಾವವೇ ಹಾಗಿರುತ್ತದೆ. ಅಂತಹವರು ಅದನ್ನು ಅನುಭವಿಸಲೇ ಬೇಕು.

ಒಟ್ಟಿನಲ್ಲಿ ನಮ್ಮ ವ್ಯಕ್ತಿತ್ವಕ್ಕೆ ಒಂದು ಸವಾಲು ಎದುರಾಗಿದೆ. ನಾವು ಅತ್ಯಂತ ವಿವೇಚನೆಯಿಂದ ಇದನ್ನು ನೋಡಬೇಕಿದೆ. ನಮ್ಮ ಗೆಳೆಯರು ಇದರಲ್ಲಿ ಸಿಲುಕಿದಾಗ ಅವರ ಬಗ್ಗೆ ನಮಗೆ ಸಾಕಷ್ಟು ವರ್ಷಗಳ ಮಾಹಿತಿ ಇರುವಾಗ ಅವರನ್ನು ಸಿನಿಕವಾಗಿ ಮಾತನಾಡಿಸಿ ಮತ್ತಷ್ಟು ಹಿಂಸಿಸದೆ ಧೈರ್ಯ ತುಂಬಬೇಕು. ಅನಾವಶ್ಯಕವಾಗಿ ಅವರನ್ನು ಅನುಮಾನದಿಂದ ನೋಡಬಾರದು. ಸಮಾಜದ ಪ್ರತಿಕ್ರಿಯೆ ಇಲ್ಲಿ ಬಹಳ ಮುಖ್ಯವಾಗುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ಅಂತರ ಸ್ಪಷ್ಟವಾಗಿ ಇರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಕೆಟ್ಟವರು ಒಳ್ಳೆಯವರನ್ನು ಕೆಟ್ಟವರೆಂದು ಬಿಂಬಿಸಿ ತಮ್ಮ ಕೆಟ್ಟ ಕೆಲಸಗಳಿಗೆ ಸಾರ್ವಜನಿಕ ಮಾನ್ಯತೆ ಪಡೆದು ಆರಾಮವಾಗಿ ಕೆಟ್ಟ ಕೆಲಸ ಮಾಡಿಕೊಂಡು ಆರಾಮವಾಗಿ ಇರುತ್ತಾರೆ ಈಗಿನ ಕೆಲವು ಕ್ಷೇತ್ರಗಳ ಗಣ್ಯರಂತೆ.

**ಎಚ್ಚರವಿರಲಿ.........**
**ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,**
**ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,**
**ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ – ಪರಿವರ್ತನೆಗಾಗಿ,**
**ಮನಸ್ಸುಗಳ ಅಂತರಂಗದ ಚಳವಳಿ,**

**–ವಿವೇಕಾನಂದ. ಎಚ್. ಕೆ.**
**9844013068**

# ಇಂದಿನ ವಿದ್ಯಾರ್ಥಿಗಳೇ ನಾಳಿನ ನಾಡಿನ ಸತ್ಪ್ರಜೆಗಳಾಗಲಿ: ಪ್ರಿಯಾಂಕ



**ಮೂಡಲಗಿ :** ಇಂದಿನ ವಿದ್ಯಾರ್ಥಿವೃಂದ ಶಿಕ್ಷಣ ಇಲಾಖೆ ಕೊಡಮಾಡುವ ಸರ್ಕಾರಿ ಸೌಲಭ್ಯಗಳಾದ ಉಚಿತ ಪಠ್ಯಪುಸ್ತಕ ಅಕ್ಷರದಾಸೋಹ ಸಮವಸ್ತ್ರ ಶಿಷ್ಯವೇತನ ಮುಂತಾದ ಸಹಾಯ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ತಮ್ಮ ವಿದ್ಯಾರ್ಥಿ ಜೀವನ ಉತ್ತಮ ಪಡೆಸಿಕೊಂಡು ಒಳ್ಳೆಯ ಭವಿಷ್ಯ ಕಟ್ಟಿಕೊಂಡು ಬದುಕಿನಲ್ಲಿ ನಾಡಿನ ಸತ್ಪ್ರಜೆಗಳಾಗಿ ಬಾಳಲಿ ಎಂದು ಶಾಲಾ ಪ್ರದಾನ ಕಾರ್ಯದರ್ಶಿ ಪ್ರಿಯಾಂಕ ಗದಾಡಿ ಹೇಳಿದರು

ತುಕ್ಕಾನಟ್ಟಿಯ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಇಂದಿನ ವಿದ್ಯಾರ್ಥಿಗಳು ಬಡವ ಬಲ್ಲಿದರೆನ್ನದೇ ಸರ್ಕಾರಿ ಶಾಲೆಗಳಲ್ಲಿ ಕಲಿತು ಅದರಲ್ಲೂ ಕನ್ನಡ ಮಾದ್ಯಮದಲ್ಲಿಯೇ ಕಲಿತು ಭವಿಷ್ಯ ರೂಪಿಸಿಕೊಳ್ಳೋಣ ಎಂದು ಹೇಳಿದರು.

ಮತ್ತೋರ್ವ ವಿದ್ಯಾರ್ಥಿ ಪ್ರತಿನಿಧಿ ಸಂಗಮೇಶ ಜೋಗಿ ಮಾತನಾಡಿ ನಾವು ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವ ಆಚರಿಸಿದ್ದೇವೆ. ಹೀಗಿರುವಾಗ ಎಲ್ಲ ವಿದ್ಯಾರ್ಥಿಗಳು ಕನ್ನಡ ನಾಡಿನ ಭಾಷೆ ನೆಲ, ಜಲದ ಬಗ್ಗೆ ಸ್ವಾಭಿಮಾನ ಬೆಳೆಸಿಕೊಂಡು ನಾಡಿನ ಪ್ರಗತಿಗಾಗಿ ಶ್ರಮಿಸುವ ಜೀವನ ನಮ್ಮದಾಗಲಿ ಎಂದು ತಾಯಿ ಭುವನೇಶ್ವರಿಗೆ ಪ್ರಾರ್ಥಿಸೋಣ ಎಂದರು.

ಮುಖ್ಯೋಪಾಧ್ಯಾಯ ಎ.ವ್ಹಿ ಗಿರೆಣ್ಣವರ ಮಾತನಾಡಿ ನಮ್ಮ ಶಾಲಾ ವಿದ್ಯಾರ್ಥಿಗಳು ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಕಾರ್ಯಕ್ರಮದ ಎಲ್ಲ ಸಾರತ್ಯವನ್ನು ಅವರೇ ನಿರ್ವಹಿಸುವದರಿಂದ ಅವರಲ್ಲಿ ನಾಯಕತ್ವದ ಗುಣ ಹಾಗೂ ಜವಾಬ್ದಾರಿ ಬೆಳೆಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘ ಗೋಕಾಕ ಘಟಕದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಸಂಗಮೇಶ ಕೊಂತಿ ಅವರನ್ನು ಅಭಿನಂದಿಸಲಾಯಿತು.

ಸಸಿಗೆ ನೀರೆರೆಯುವದರ ಮುಖಾಂತರ ಕಾರ್ಯಕ್ರಮವನ್ನು ಕುಮಾರಿ ಸೃಷ್ಟಿ ದೊಡಮನಿ ಉದ್ಘಾಟಿಸಿದರು, ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಾದ ರಾಧಿಕಾ ಹಿರೇಹೊಳಿ ಸಂದೀಪ ಗದಾಡಿ, ಸೇವಂತಿ ಹಿರೇಹೊಳಿ, ಗೌತಮಿ ಗದಾಡಿ, ಸಾತ್ವಿಕ ಹಿರೇಹೊಳಿ ಹಾಗೂ ಶಿಕ್ಷಕರಾದ ವಿಮಲಾಕ್ಷಿ ತೋರಗಲ, ಸುಜಾತಾ ಕೋಳಿ, ಭಾಗೀರಥಿ ಕಳ್ಳಿಗುದ್ದಿ, ರೂಪಾ ಹೂಲಿಕಟ್ಟಿ, ವಾಸಂತಿ ಬೋರಗುಂಡಿ, ನಹಾದೇವ ಗೋಮಾಡಿ, ಸಿ.ಎಸ್. ಸೀರಿ, ಹೊಳೆಪ್ಪ ಗದಾಡಿ ಖಾತೂನಬಿ ನದಾಫ ಭಾಗವಹಿಸಿದ್ದರು. ಕುಮಾರಿ ಸರೋಜಾ ಪಡದಳ್ಳಿ ಕಾರ್ಯಕ್ರಮ ನಿರೂಪಿಸಿದರು.

# ಶನಿವಾರ ಕಲ್ಲೋಳಿಯಲ್ಲಿ ಕೃಷಿ ಕಣಜ 2024

**ಮೂಡಲಗಿ :** ದಾರವಾಡದ ಕೃಷಿ ವಿಶ್ವವಿದ್ಯಾಲಯ ಕಲ್ಲೋಳಿಯ ಬಸವೇಶ್ವರ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ 2024–25 ಅಂಗವಾಗಿ ಬೆಳೆ ವಿಚಾರ ಸಂಕಿರಣ ಕೃಷಿ ಪ್ರದರ್ಶನ ಕೃಷಿ ಕಣಜವನ್ನು ಶನಿವಾರ ಸಂಜೆ 4 ಗಂಟೆಗೆ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ರಮೇಶ ಬೆಳಕೂಡ ತಿಳಿಸಿದ್ದಾರೆ, ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ ಪಿ ಎಲ್ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸುವರು ಸಂಸ್ಥೆಯ ಕಾರ್ಯದರ್ಶಿ ಡಾ ಭೋಜರಾಜ ಬೆಳಕೂಡ ಅಧ್ಯಕ್ಷತೆ ವಹಿಸುವರು,ಮುಖ್ಯ ಅತಿಥಿಗಳಾಗಿ ಕೃಷಿ ವಿಶ್ವವಿದ್ಯಾಲಯದ ಡೀನ ಡಾ ಆಯ್ ಕೆ ಕಾಳಪ್ಪನ್ನವರ, ಅರಭಾಂವಿಯ ರಾಣಿ ಚನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯದ ಡೀನ ಡಾ ಎಮ್ ಜಿ ಕೇರುಟಗಿ, ಸಾವಯವ ಕೃಷಿ ರೈತ ರಮೇಶ ಖಾನಗೌಡರ ಅತಿಥಿಗಳಾಗಿ ಕಲ್ಲೋಳಿಯ ಪ,ಪಂ ಅಧ್ಯಕ್ಷ ಬಿ ಬಿ ದಾಸನ್ನವರ, ಮುಖ್ಯಾಧಿಕಾರಿ ಚಿದಾನಂದ ಮುಗಳಖೋಡ,ನಾಗನೂರ ಪ,ಪಂ ಮುಖ್ಯಾಧಿಕಾರಿ ಬಾಳನಾಯಿಕ ಕುಮರೇಶಿ, ಗೋಪಾಳ ಮುತ್ತೆಪ್ಪಗೋಳ,

ಮಲ್ಲಪ್ಪ ಕಡಾಡಿ,ಶಿಬಪ್ಪ ಬೆಳಕೂಡ,ಬಸವರಾಜ ಕಡಾಡಿ,ಶಂಕರ ಕಡಾಡಿ,ಗೀರಿಮಲ್ಲಪ್ಪ ಸವಸುದ್ದಿ,ಧರೆಪ್ಪ ಖಾನಗೌಡರ,ಮಂಜು ಗದಾಡಿ ಆಗಮಿಸುವರು ಎಂದು ಬಸವೇಶ್ವರ ಶಿಕ್ಷಣ ಸಂಸ್ಥೆಯ ಆಡಳತಾಧಿಕಾರಿ ಪ್ರಕಾಶ ಗರಗಟ್ಟಿ ತಿಳಿಸಿದ್ದಾರೆ.

# ಅನ್ಯ ಭಾಷೆಗಳ ಪ್ರಭಾವದಿಂದ ಕನ್ನಡ ಭಾಷೆ ನಶಿಸುತ್ತಿದೆ



**ಜಮಖಂಡಿ :** ರಾಜಧಾನಿ ಬೆಂಗಳೂರಿನಲ್ಲಿ ಅನ್ಯ ಭಾಷೆಗಳ ಪ್ರಭಾವದಿಂದ ಕನ್ನಡಭಾಸೆ ದಿನದಿಂದ ದಿನಕ್ಕೆ ವಿನಾಶದ ಹಾದಿ ಹಿಡಿದಿದ್ದು, ರಾಜ್ಯದ ವಿವಿಧ ಭಾಗದಲ್ಲಿ ಇನ್ನೂ ಜೀವಂತವಾಗಿದೆ. ಕನ್ನಡಿಗರು ಈಗಲೇ ಎಚ್ಚೆತ್ತುಕೊಂಡು ಕನ್ನಡ ಭಾಷೆ ಉಳಿವಿಗಾಗಿ ಶ್ರಮಿಸಬೇಕು ಎಂದು ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಹೇಳಿದರು.

ನಗರದ ತುಂಗಳ ಪದವಿಪೂರ್ವ ಕಾಲೇಜಿನ ಸಭಾಭವನದಲ್ಲಿ ಪ್ರೌಢ ಶಾಲೆ ಮಕ್ಕಳಿಗಾಗಿ ಆಯೋಜಿಸಿದ್ದ ಸಾಹಿತ್ಯ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ಕನ್ನಡನಾಡನ್ನು ಶ್ರೀಗಂಧದ ನಾಡು, ಕರುನಾಡು, ಕನ್ನಡಾಂಭೆ ನಾಡು, ತಾಯಿ ಭುವನೇಶ್ವರಿ ನಾಡು ಎಂಬೆಲ್ಲ ಹೆಸರುಗಳಿಂದ ಕರೆಯುತ್ತೇವೆ. ಹಚ್ಚಹಸುರಿನ ಸುಂದರ ಬೆಟ್ಟಗುಡ್ಡಗಳು, ನದಿಗಳು, ಸಾಧು–ಸಂತರು, ಶಿವಶರಣರು ದಾಸರು, ಕವಿಗಳಿಂದ ಕಂಗೊಳಿಸುತ್ತಿರುವ ಕನ್ನಡನಾಡು ಎಂಬ ಹೆಸರಿಗೆ ಒಂದು ಧೀಮಂತ ಶಕ್ತಿಯಿದೆ. ಸುಂದರ, ಸಮೃದ್ಧ ನಾಡಿನಲ್ಲಿ ಜನಿಸಿರುವುದು ನಮ್ಮೆಲ್ಲರ ಅದೃಷ್ಟವಂತರು ಎಂದರು.

ತುಂಗಳ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ಲಕ್ಷ್ಮೀ ತುಂಗಳ ಮಾತನಾಡಿ, ಮಾತೃಭಾಷೆಯಲ್ಲಿ ಗಟ್ಟಿಯಾಗಿ ವಿದ್ಯಾರ್ಥಿಗಳ ಬೇರೂರಬೇಕು. ಕನ್ನಡ ಶ್ರೀಮಂತ ಸಾಹಿತ್ಯವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸಾಹಿತ್ಯವನ್ನು ಓದಬೇಕು. ಸಾಹಿತ್ಯ ನಮ್ಮ ಬದುಕನ್ನು ತಿದ್ದಿತಿಡಿ ಸದ್ದಢಗೊಳಿಸುತ್ತದೆ. ನಮ್ಮ ಭಾರತೀಯ ಸಂಸ್ಕೃತಿಗೆ ಅನಾದಿಕಾಲದ ಇತಿಹಾಸವಿದೆ. ನಾವು ಎಲ್ಲೇ ಇದ್ದರೂ ನಮ್ಮ ಸಂಸ್ಕೃತಿ, ಸಾಂಪ್ರದಾಯವನ್ನು ಮರೆಯಬಾರದು. ಕನ್ನಡ ಭಾಷೆಯನ್ನು ಪ್ರೀತಿಯಿಂದ ಕಲಿಯಬೇಕು. ನಮ್ಮ ಭಾಷೆಯ ಬಗ್ಗೆ ನಮಗೆ ಮೊದಲು ಗೌರವ ಇರಬೇಕು ಎಂದರು.

ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಅಶೋಕ ತುಂಗಳ, ಮುಖ್ಯಶಿಕ್ಷಕ ಡಿ.ಜಿ.ವಾಲಿ ಸಹಿತ ಹಲವರು ಇದ್ದರು. ಸಂಗೀತ ನಿರ್ದೇಶಕ ಉಪಾಸನಾ ಮೋಹನ, ಗಾಯಕ ಪಂಚಮ ಹಳಿಬಂಡಿ ಸಂಗೀತ ಸೇವೆ ಸಲ್ಲಿಸಿದರು.

# ಮಾದಕವಸ್ತು ಮುಕ್ತ ಸಮಾಜ ನಿರ್ಮಾಣವಾಗಬೇಕು: ಪಿ.ಎಸ್.ಐ ನೇರಳೆ



**ಮೂಡಲಗಿ :** ಅಮಲು ಬರಿಸುವ ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯ ಅನೇಕ ದೈಹಿಕ ಹಾಗೂ ಮಾನಸಿಕ ಕಾಯಿಲೆಗೆ ಒಳಗಾಗಿ ತನ್ನ ಜೀವವನ್ನೆ ಕಳೆದುಕೊಳ್ಳುತ್ತಾನೆ ಹಾಗೂ ಆರ್ಥಿಕವಾಗಿ ದಿವಾಳಿ ಕೂಡ ಆಗುತ್ತಾನೆ. ಇದರಿಂದ ಕುಟುಂಬ ಹಾಗೂ ಸಮಾಜದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಸಮಾಜ ಮಾದಕ ವಸ್ತುಗಳಿಂದ ಮುಕ್ತವಾಗಿರಬೇಕು ಎಂದು ಘಟಪ್ರಭಾ ಪೋಲಿಸ್ ಠಾಣೆಯ ಪಿ ಎಸ್ ಐ. ಎಚ್. ಕೆ. ನೇರಳೆ ಹೇಳಿದರು.

ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಘಟಪ್ರಭಾ ಪೋಲಿಸ್ ಠಾಣೆ ಸಹಯೋಗದಲ್ಲಿ ಆಯೋಜಿಸಿದ್ದ 'ಅಂತರಾಷ್ಟ್ರೀಯ ಮಾದಕವಸ್ತು ವಿರೋಧಿ ದಿನಾಚರಣೆ ಹಾಗೂ ಲೈಂಗಿಕ ಕಿರುಕುಳ ತಡೆ ಜಾಗೃತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಲೈಂಗಿಕ ಕಿರುಕುಳದಿಂದ ಸಮಾಜದ ಶಾಂತಿ ಸುವ್ಯವಸ್ಥೆ ಹದಗೆಡುತ್ತದೆ. ಅಲ್ಲದೇ ಲಿಂಗ ಅಸಮಾನತೆ ಹೆಚ್ಚಾಗುತ್ತದೆ. ಸ್ತ್ರೀಯರನ್ನು ಗೌರವ ಭಾವನೆಯಿಂದ ಕಾಣಬೇಕೆಂದು ಎಂದು ಕರೆ ನೀಡಿದರು.

ಪ್ರೊ. ಡಿ.ಎಸ್. ಹುಗ್ಗಿ ಮಾತನಾಡಿ, ವಿಶ್ವದಾದ್ಯಂತ ದುಶ್ಚಟಗಳಿಗೆ ಮಕ್ಕಳು ಮತ್ತು ಯುವಕರು ಹೆಚ್ಚು ಬಲಿಯಾಗುತ್ತಿದ್ದಾರೆ. ಮಾದಕ ವಸ್ತುಗಳ ಮಾರಾಟ ಹಾಗೂ ಸಾಗಾಣೆ ಕಾನೂನ ಬಾಹಿರ ಎಂದು ಗೊತ್ತಿದ್ದರೂ ಇದರ ದಂಧೆ ಎಗ್ಗಿಲ್ಲದೆ ನಡೆಯುತ್ತಿದೆ. ಡ್ರಗ್ ಮಾಫಿಯಾ ಹತೋಟಿಗೆ ತರಲು ವಿಶ್ವದೆಲ್ಲೆಡೆ ಕಾನೂನು ಪ್ರಯತ್ನಗಳು ನಡೆಯುತ್ತಿವೆ. ಆದರೆ ಇದನ್ನು ಬುಡ ಸಮೇತ ಕಿತ್ತು ಹಾಕಲು ಸಾಧ್ಯವಾಗಿಲ್ಲ. ಪ್ರತಿಯೊಬ್ಬ ನಾಗರಿಕನೂ ಈ ಬಗ್ಗೆ ಜಾಗೃತಿ ಹೊಂದಿ ವಿಶ್ವವನ್ನು ಮಾದಕವಸ್ತುಗಳಿಂದ ಮುಕ್ತವಾಗಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಡಾ. ಎಂ.ಬಿ. ಕುಲಮೂರ, ಡಾ. ಕೆ.ಎಸ್. ಪರವ್ವಗೋಳ, ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಶಂಕರ ಎಂ. ನಿಂಗನೂರ, ವಸುಂದರಾ ಕಾಳೆ, ಬಿ.ಕೆ. ಸೊಂಟನವರ, ಕಾಲೇಜಿನ ಲೈಂಗಿಕ ಕಿರುಕುಳ ತಡೆ ಸಮಿತಿಯ ಸಂಯೋಜಕ ಬಿ.ಸಿ. ಮಾಳಿ, ವಿಲಾಸ ಕೆಳಗಡೆ, ಸಂತೋಷ ಜೋಡಕುರಳಿ ಇನ್ನಿತರರು ಉಪಸ್ಥಿತರಿದ್ದರು.

# ಮಕ್ಕಳು ತಂದೆ–ತಾಯಿ ಹಾಗೂ ಗುರುಗಳನ್ನು ಗೌರವಿಸಬೇಕು: ಡಾ. ಆರ್.ವಿ. ಕುಲಕರ್ಣಿ



**ವಿಜಯಪುರ :** ಮಕ್ಕಳು ತಂದೆ– ತಾಯಿ, ಗುರುಗಳನ್ನು ಗೌರವಿಸುವ ಮೂಲಕ ಜೀವನವನ್ನು ಸುಭದ್ರ ಮಾಡಿಕೊಳ್ಳಬೇಕು ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ. ಆರ್.ವಿ. ಕುಲಕರ್ಣಿ ಹೇಳಿದ್ದಾರೆ.

ಗುರುವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಎಸ್. ಆವರಣದ ಮಾಧ್ಯಮಿಕ ಶಾಲೆಗಳ ಹಾಗೂ ಎಂ. ಬಿ. ಪಾಟೀಲ ಫೌಂಡೇಶನ್ ಅಡಿಯಲ್ಲಿ ಮಕ್ಕಳ ದಿನಾಚರಣೆ 2024–25 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳು ನಾಳೆಯ ನಾಗರಿಕರು. ಶಿಕ್ಷಣ ಮತ್ತು ಸಂಸ್ಕೃತಿ ಕಾಲಕಾಲಕ್ಕೆ ಬದಲಾಗುತ್ತಿದೆ. ಪ್ರತಿಯೊಂದು ಹಂತದಲ್ಲಿ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮೊಬೈಲ್ ಬಳಕೆ ಮತ್ತು ಸಾಮಾಜಿಕ ಜಾಲತಾಣಗಳ ಅತೀ ಅವಲಂಬನೆಯಿಂದ ಮನಸ್ಸುಗಳು ಬದಲಾಗುತ್ತಿವೆ. ವಿದ್ಯಾರ್ಥಿಗಳು ಮೊಬೈಲ್, ಟಿವಿಗಳಿಂದ ದೂರವಿರಬೇಕು. ಅವುಗಳ ಸಾಧಕ, ಬಾಧಕಗಳನ್ನು ಅರಿಯಬೇಕು. ಸಾಧ್ಯವಿದ್ದಷ್ಟು ಅವುಗಳನ್ನು ಕಡಿಮೆ ಬಳಸಿ ವಿದ್ಯಾರ್ಜನೆ ಮಾಡಿ ಮಾದರಿ ಜೀವನ ರೂಪಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ವಿಜಯಪುರ ನಗರ ಬಿಇಓ ಬಸವರಾಜ ತಳವಾರ ಮಾತನಾಡಿ, ಇಂದು ಮಕ್ಕಳು ಸಂಭ್ರಮಿಸುವ ದಿನ. ಬಿ.ಎಲ್.ಡಿ.ಇ ಸಂಸ್ಥೆ ವಿಜಯಪುರ ಜಿಲ್ಲೆಯ ಲಕ್ಷಾಂತರ ಮಕ್ಕಳಿಗೆ ವಿದ್ಯೆ ನೀಡುವ ಮೂಲಕ ರಾಜ್ಯ ಮತ್ತು ದೇಶಕ್ಕೆ ಅಮೂಲ್ಯ ಕೊಡುಗೆ ನೀಡಿದೆ. ಸಂಸ್ಥೆಯ ಶಾಲೆಗಳು ಸಜೀವ ದೇವಾಲಯಗಳಾಗಿವೆ. ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ, ಬಂಥನಾಳ ಶ್ರೀಗಳು ಮತ್ತು ಶ್ರೀ ಬಿ. ಎಂ. ಪಾಟೀಲರು ಸಂಸ್ಥೆಯ ಮೂಲಕ ಮಕ್ಕಳ ಭವಿಷ್ಯ ರೂಪಿಸಿದ್ದಾರೆ. ಎಂ. ಬಿ. ಪಾಟೀಲರು ಮಕ್ಕಳ ಮೇಲೆ ಭಾರತದ ಬದುಕು ನಿಂತಿದೆ ಎಂಬುದನ್ನು ಅರಿತು ಸಂಸ್ಥೆ ಶಾಲೆ, ಕಾಲೇಜುಗಳ ಮೂಲಕ ವಿಶ್ವ ದರ್ಜೆಯ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ ಎಂದು ಹೇಳಿದರು.

ಸಂಸ್ಥೆಯ ಆಡಳಿತಾಧಿಕಾರಿ ವಿಲಾಸ ಬಗಲಿ ಮಾತನಾಡಿ, ಇಂದಿನ ಮಕ್ಕಳು ಭಾರತದ ಭವಿಷ್ಯದ ನಾಯಕರು ಎಂದು ನಂಬಿದ್ದ ನೆಹರೂ ಅವರಿಗೆ ಮಕ್ಕಳ ಬಗ್ಗೆ ವಿಶೇಷ ಪ್ರೀತಿ ಹೊಂದಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಮಕ್ಕಳು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಬೇಕು. ಈ ಪ್ರತಿಭಾವಂತ ಮಕ್ಕಳಿಗೆ ಅಗತ್ಯವಾದ ಕಲಿಕಾ ವ್ಯವಸ್ಥೆ ನಮ್ಮ ಶಾಲೆಯಲ್ಲಿದೆ. ವಿಕಲಚೇತನರಿಗೆ ವಿಶೇಷ ಸೌಲಭ್ಯ ಒದಗಿಸುವ ಮೂಲಕ ಸಮಾಜಮುಖಿ ಕೆಲಸವನ್ನು ಬಿ.ಎಲ್.ಡಿ.ಇ ಸಂಸ್ಥೆ ಮಾಡುತ್ತಿದೆ. ಮಕ್ಕಳು ಮೊಬೈಲ್ ಜೊತೆ ಕಾಲ ಕಳೆಯುವ ಬದಲು ಪುಸ್ತಕವನ್ನು ಓದುವ ಮೂಲಕ ಸಾಧನೆ ಮಾಡಬಹುದು ಎಂದು ಹೇಳಿದರು.

ಆಡಳಿತಾಧಿಕಾರಿ ಐ. ಎಸ್. ಕಾಳ್ಳಪ್ಪನವರ ಮಾತನಾಡಿ, ಮಕ್ಕಳೇ ದೇಶದ ನಿಜವಾದ ಸಂಪತ್ತು. ಅವರಿಗೆ ಸರಿಯಾದ ಮಾರ್ಗದರ್ಶನ ದೊರೆತರೆ ದೇಶದ ಪ್ರಗತಿಗೆ ಪೂರಕವಾಗಿ ಬೆಳೆಯುತ್ತಾರೆ. ಈ ಕೆಲಸ ನಮ್ಮೆಲ್ಲರಿಂದ ಆಗಬೇಕು. ಶಿಕ್ಷಕರು ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ಕಂಡು ಶಿಕ್ಷಣ ನೀಡಬೇಕು ಎಂದು ಹೇಳಿದರು

ಮುಖ್ಯೋಪಾಧ್ಯಾಯ ಕೆ. ವಿ. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಾನಾ ತರಗತಿಗಳ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

ಶಿಕ್ಷಣ ಇಲಾಖೆ ನೋಡಲ್ಅಧಿಕಾರಿಎಲ್. ಎಸ್. ಬಿರಾದಾರ, ಸಂಯೋಜನಾಧಿಕಾರಿ ಪಿ. ಎಸ್. ನಾಲತವಾಡ, ಎಸ್. ಎಸ್. ಪಿಯು ಕಾಲೇಜಿನ ಪ್ರಾಚಾರ್ಯ ಡಾ. ಜಿ. ಡಿ. ಅಕಮಂಚಿ, ಮುಖ್ಯೋಪಾಧ್ಯಾಯರಾದ ವಿ. ಪಿ. ನಿಡೋಣಿ, ಸಿದ್ದು ಬಿರಾದಾರ, ಬಿ.ಎಲ್.ಡಿ.ಇ ಸಂಸ್ಥೆಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಂಘದ ಸಂಚಾಲಕ ಸೂರ್ಯಕಾಂತ ಬಿರಾದಾರ, ವಿದ್ಯಾರ್ಥಿ ಮುಖಂಡರಾದ ಶ್ರೀಸಾಯಿ ಶಿಕಾರಿ, ಸುಶ್ಮಿತಾ ರಾಠೋಡ, ನಮೃತಾ ಚನಗೊಂಡ, ವೈಷ್ಣವಿ ರಾಠೋಡ ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯ ವಿ. ಬಿ. ಪಾಟೀಲ ಸ್ವಾಗತಿಸಿದರು. ಶಿಕ್ಷಕರಾದ ಆರ್. ಎಸ್. ಪಟ್ಟಣಶೆಟ್ಟಿ ಮತ್ತುಎಸ್. ಬಿ. ಕರಿಕಬ್ಬಿ ನಿರೂಪಿಸಿದರು. ಶಿಕ್ಷಕಿ ಮೇಘಾ ಗಾಡಿವಡ್ಡರ ವಂದಿಸಿದರು.

# ರಾಣಿ ಚನ್ನಮ್ಮ ವಿ.ವಿ. ರಾ.ಸೇ.ಯೋ ಕೋಶಕ್ಕೆ ಸಲಹಾ ಸಮಿತಿ ಸದಸ್ಯರಾಗಿ ನೇಮಕ



**ಮೂಡಲಗಿ :** ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಅಧಿಕಾರಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪ್ರಭಾರಿ ಸಂಯೋಜನಾಧಿಕಾರಿ ಶಂಕರ ಎಂ. ನಿಂಗನೂರ ಅವರನ್ನು 2024–25ನೇ ಸಾಲಿನ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶಕ್ಕೆ ಸಲಹಾ ಸಮಿತಿ ಸದಸ್ಯರನ್ನಾಗಿ ನೇಮಕಮಾಡಿ ಮಾನ್ಯ ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ್ ಆದೇಶ ಹೊರಡಿಸಿದ್ದಾರೆ. ಇವರನ್ನು ಸಂಸ್ಥೆಯ ಚೇರಮನ್ನ ಬಸಗೌಡ ಪಾಟೀಲ, ಆಡಳಿತ ಮಂಡಳಿಯ ಸರ್ವ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಭೋದಕ/ಭೋದಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಮೌಲಾನಾ ಅಬುಲ್ ಕಲಾಂ ಆಜಾದ ಮತ್ತು ಒನಕೆ ಓಬವ್ವಳ ಜಯಂತಿ ಆಚರಣೆ




**ವಿಜಯಪುರ :** ನಗರದ ಸಿದ್ಧಾರ್ಥ ಹಾಗೂ ಮಾತೋಶ್ರೀ ರಮಾಬಾಯಿ ಅಂಬೇಡ್ಕರ ಪ್ರೌಢಶಾಲೆಯಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದ ಹಾಗೂ ಒನಕೆ ಓಬವ್ವಳ ಜಯಂತಿ ಆಚರಿಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕ ಅಧ್ಯಕ್ಷ ತುಕಾರಾಮ ಚಂಚಲಕರ ಮಕ್ಕಳನ್ನು ಉದ್ದೇಶಿಸಿ ಮಾತನಾಡಿ, ಭಾರತದ ಪ್ರಥಮ ಶಿಕ್ಷಣ ಮಂತ್ರಿ ಹಾಗೂ ಚಿತ್ರದುರ್ಗದ ಒನಕೆ ಓಬವ್ವಳ ಸಂಪೂರ್ಣ ಚರಿತ್ರೆಯನ್ನು ಹೇಳಿದರು.

ಕಾರ್ಯಕ್ರಮದಲ್ಲಿ ಸಿದ್ಧಾರ್ಥ ಪ್ರೌಢಶಾಲೆಯ ಮುಖ್ಯ ಗುರುಗಳಾದ ನಟರಾಜ ಚಂಚಲಕರ, ವೀಣಾ ಶಿರಗುಪ್ಪಿ, ಮಾತೋಶ್ರೀ ರಮಾಬಾಯಿ ಅಂಬೇಡ್ಕರ ಪೌಢಶಾಲೆ ಹಾಗೂ ಕಲಾ, ವಾಣಿಜ್ಯ, ಸೈನ್ಸ್ ಪದವಿ ಮಹಾವಿದ್ಯಾಲಯದ ಶಶಿಕಾಂತ ಕಟ್ಟಿ, ಎಸ್.ಎಸ್. ಗುಡ್ಲೇನವರ, ಜೆ.ಜೆ. ಅಂಜುಟಗಿ, ರೇಷ್ಮಾ ತಾಳಿಕೋಟಿ, ಸಚಿನ ನಾಯಕ, ಅಶ್ವಿನಿ ನಾಯಕ, ಜೇವಜಿ ಕಲಬುರ್ಗಿ, ಎಸ್.ಆರ್. ಪುಲಾರಿ, ರಾಮ ಯಾರವಳಿ, ಚಂದ್ರಶೇಖರ ಈಟಿ, ಎಸ್.ಎಸ್. ಬಸರಗಿ ಉಪಸ್ಥಿತರಿದ್ದರು.

# ಜಿಲ್ಲಾಡಳಿತದಿಂದ ಸಂತ ಶ್ರೇಷ್ಠ ಭಕ್ತ ಕನಕದಾಸ ಜಯಂತಿ



**ವಿಜಯಪುರ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನ.18ರಂದು ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9–30ಕ್ಕೆ ಜಯಂತಿ ಕಾರ್ಯಕ್ರಮದ ಅಂಗವಾಗಿ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಕನಕದಾಸರ ಭಾವಚಿತ್ರ ಮೆರವಣಿಗೆ ಹಾಗೂ ಬೆಳಿಗ್ಗೆ 10–30ಕ್ಕೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಯಂತಿ ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ. ಬಿ. ಪಾಟೀಲ ಅವರು ಉದ್ಘಾಟಿಸಲಿದ್ದಾರೆ. ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಕರ್ನಾಟಕ ಸರ್ಕಾರದ ನವದೆಹಲಿಯ ವಿಶೇಷ ಪ್ರತಿನಿಧಿ ಹಾಗೂ ವಿಧಾನ ಪರಿಷತ್ತಿನ ಶಾಸಕ ಪ್ರಕಾಶ ಹುಕ್ಕೇರಿ, ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ, ಸಂಸದರಾದ ರಮೇಶ ಜಿಗಜಿಣಗಿ, ಶ್ರೀಮತಿ ಸುಧಾ ಮೂರ್ತಿ ಸೇರಿದಂತೆ ಜಿಲ್ಲೆಯ ವಿವಿಧ ಶಾಸಕರು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಚೇತನಾ ಬಿಸಿಎ, ಬಿಬಿಎ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಎ.ಎಸ್.ಕೊಳಮಲಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಭಂಟನೂರಿನ ಮಹೇಶ ಪೂಜಾರಿ ಸುಗಮ ಸಂಗೀತ ನಡೆಸಿಕೊಡಲಿದ್ದು, ಸಿದ್ಧರಾಮ ಬಿರಾದಾರ, ರಾಮಸ್ವಾಮಿ ಕೊಳಮಲಿ, ಎಸ್.ಸಿ. ಕುರ್ಲೆ ಕನಕ ಕಾವ್ಯ ವಾಚನ ಮಾಡಲಿದ್ದಾರೆ.

## ಶ್ರೀರಾಮ ಲಾಹೋಟಿ ನಿಧನ



**ಜಮಖಂಡಿ :** ನಗರದ ಆದರ್ಶ ಬಡಾವಣೆಯ ನಿವಾಸಿ ವ್ಯಾಪಾರಸ್ಥ ಶ್ರೀರಾಮ ಮೋತಿಲಾಲ್ ಲಾಹೋಟಿ (78) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ವಿಜಯೇಂದ್ರ ದೇಶಪಾಂಡೆ ನಿಧನ



**ಜಮಖಂಡಿ :** ನಗರದ ರಾಮೇಶ್ವರ ಕಾಲನಿ ನಿವಾಸಿ ನಿವೃತ ನೌಕರ ವಿಪ್ರ ಸಮಾಜದ ಹಿರಿಯಜೀವಿ ವಿಜಯೇಂದ್ರ ಕೃಷ್ಣರಾವ ದೇಶಪಾಂಡೆ (84) ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ತೇರದಾಳದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ
### ಓದುಗರನ್ನು ಸೆಳೆಯಲು ಕಾರ್ಯಕ್ರಮ ಹಮ್ಮಿಕೊಳ್ಳುವುದು ವಿಷಾದ



**ತೇರದಾಳ :** ಗ್ರಂಥಾಲಯ ಮನುಷ್ಯನ ಬದುಕು ಕಟ್ಟಿಕೊಡುವ ಸುಂದರವಾದ ಅಸ್ತ್ರವಾಗಿದೆ. ಆದರೆ ಇಂದು ಗ್ರಂಥಾಲಯದಲ್ಲಿ ಓದುಗರನ್ನು ಸೆಳೆಯಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿರುವುದು ನಿಜಕ್ಕೂ ವಿಷಾದಕರ ಸಂಗತಿ ಎಂದು ಹಿರಿಯ ಸಾಹಿತಿ ಎಸ್.ಆರ್. ರಾವಳ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿನ ಶಾಖಾ ಗ್ರಂಥಾಲಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪುಸ್ತಕ ಪತ್ರಿಕೆಗಳನ್ನು ಖರೀದಿಸಿ ಓದಲು ಸಾಧ್ಯವಾಗದ ಎಷ್ಟೋ ಜನ ಗ್ರಂಥಾಲಯದಲ್ಲಿ ಓದುವ ಮೂಲಕ ನೌಕರಿಗಳನ್ನು ಹಿಡಿದು ತಮ್ಮ ಬದುಕಿನ ನೆಲೆ ಕಂಡುಕೊಂಡಿದ್ದಾರೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ ಓದುವ ಪ್ರವೃತ್ತಿ ಮರೀಚಿಕೆಯಾಗುತ್ತಿದ್ದು, ಬರೀ ಮೊಬೈಲ್‌ನಲ್ಲಿಯೇ ಕಾಲಹರಣ ನಡೆಯುತ್ತಿದೆ ಎಂದು ಹೇಳಿದರು.

ಹಿರಿಯ ಕಲಾವಿದ ರಾಯಪ್ಪ ಕುಂಬಾರ ಕುಂಬಾರ, ಗ್ರಂಥಾಲಯ ಎಂದರೆ ಮೂಗು ಮುರಿಯುವ ಜನ ಹೆಚ್ಚಾಗಿದ್ದಾರೆ.

ಆದರೆ ಗ್ರಂಥಾಲಯ ಜ್ಞಾನದ ದೇಗುಲ ಎಂಬುದು ಅರಿಯಬೇಕೆಂದು ಹೇಳಿದರು. ಶಾಖಾ ಗ್ರಂಥಪಾಲಕ ಕಲ್ಲೇಶ ಕುಂಬಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರಂತರ ಓದುಗರಿಗೆ ಇದೇ ಸಂದರ್ಭದಲ್ಲಿ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಓದುಗರಾದ ಅಶೋಕ ಮಹಾಬಳಶೆಟ್ಟಿ, ಪದ್ಮಸಾಗರ ನಾಗನೂರ, ಸತ್ಯಪ್ಪ ಕಾಖಂಡಕಿ ಇದ್ದರು.

# ಹಳಗನ್ನಡ ಜ್ಞಾನ ಪ್ರತಿಯೊಬ್ಬರಿಗೂ ಅವಶ್ಯಕ: ಶಾಸಕ ಗುಡಗುಂಟಿ

**ಜಮಖಂಡಿ :** ಸಾಹಿತ್ಯ ಸೊಗಡನ್ನು ಅರ್ಥೈಸಿಕೊಳ್ಳಲು ಹಳಗನ್ನಡ ಜ್ಞಾನ ಅವಶ್ಯವಾಗಿದ್ದು, ಹಳಗನ್ನಡ ಬಗ್ಗೆ ನಿರ್ಲಕ್ಷ ಬೇಡ ಹಳಗನ್ನಡದ ಜ್ಞಾನ ಪ್ರತಿಯೊಬ್ಬರಿಗೂ ಅವಶ್ಯಕವಾಗಿದೆ ಎಂದು ಶಾಸಕ ಡಾ.ಜಗದೀಶ ಗುಡಗುಂಟಿ ಹೇಳಿದರು.

ನಗರದ ಬಾಲಕೆಯರ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ ಪ್ರೌಢಶಾಲಾ ವಿಭಾಗದ ಜ್ಞಾನಸಭಾಂಗಣದಲ್ಲಿ ಶುಕ್ರವಾರ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ, ಜಿಲ್ಲಾ ಮತ್ತು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಜಿಲ್ಲಾ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ಡಾ.ಡಿ.ಎಲ್. ನರಸಿಂಹಚಾರ್ ದತ್ತಿನಿಧಿ ನಿಮಿತ್ತ ನಾಲ್ಕು ದಿನ ಹಳಗನ್ನಡ ಸಾಹಿತ್ಯಬೋಧನಾ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಶ್ರೇಷ್ಠವಾದ ನಮ್ಮ ಕನ್ನಡ ಭಾಷೆಗೆ ನಾವೆಲ್ಲರೂ ದಕ್ಕೆ ತರುವಂತ ಕಾಲಗಟ್ಟದಲ್ಲಿ ನಾವಿದ್ದು, ಅದರಲ್ಲಿ ಹಳಗನ್ನಡ ವಿಷಯವನ್ನು ಅರ್ಥೈಸಿಕೊಂಡು ಬೋಧನೆ ಮಾಡುವುದು ಕಷ್ಟಸಾಧ್ಯವಾಗಿರುವ ಸಂದರ್ಭದಲ್ಲಿ ಹಂಪಿ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಕಾರ್ಯ ಶ್ಲಾಘನೀಯವಾಗಿದೆ. ಹಳಗನ್ನಡದ



ಭಾಷಾ ಕೌಶಲ್ಯವನ್ನು ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯ ಭಾಷಾ ಶಿಕ್ಷಕರ ಮೇಲಿದೆ. ಪ್ರಾಚೀನತೆ ಹೊಂದಿದ ಕನ್ನಡ ಸಂಸ್ಕೃತಿ ಉಳಿಸಿ ಬೆಳಸಬೇಕಾಗಿದೆ, ಹಳಗನ್ನಡ ಸಾಹಿತ್ಯದ ಗಟ್ಟಿತನ ಬಿಟ್ಟು ಹೋದರೆ ಮುಂದಿನ ಪೀಳಿಗೆಗೆ ಕನ್ನಡ ಕಲಿಸುವುದು ಕಠಿಣವಾಗಲಿದ್ದು, ಹಳಗನ್ನಡ ಬಗ್ಗೆ ನಿರ್ಲಕ್ಷ ಸಲ್ಲದು ಎಂದರು.

ವಿಶ್ರಾಂತ ಕುಲಪತಿ ಭಾಷಾ ವಿದ್ವಾಂಸ ಡಾ.ಎ.ಮುರಗೆಪ್ಪ ಮಾತನಾಡಿ, ಬೇರೆ ಭಾಷೆಗಳ ಪ್ರಭಾವದ ಒತ್ತಡ ಸಮಯದಲ್ಲಿ ಕನ್ನಡ ಭಾಷೆ ಶ್ರೀಮಂತಿಕೆಯನ್ನು ನಮ್ಮ ಶಿಕ್ಷಕರು ಅರಿತುಕೊಂಡು ಪಾಠ ಬೋಧನೆ ಪರಂಪರೆ ರೂಢಿಸಿಕೊಳ್ಳಬೇಕು. ಮಕ್ಕಳ ಕಲಿಕೆಯಲ್ಲಿ ಭಾಷಾ ಪ್ರೌಢಿಮೆ ಮುಖ್ಯವಾಗಿದ್ದು, ಹಳಗನ್ನಡ ಸಾಹಿತ್ಯದಲ್ಲಿರುವ ಪದಗಳನ್ನು ಬಿಡಿಸಿ ಓದುವ ಭಾಷಾ ಅಭಿರುಚಿಯನ್ನು ಶಿಕ್ಷಕರು ಮಕ್ಕಳಿಗೆ ತಿಳಿಸಿಕೊಡುವ ಕೆಲಸ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಮಾತನಾಡಿ, ಕಾಲ ಕ್ರಮೇಣ ಶಿಕ್ಷಕರು ಸಂಶೋಧನಾ ಪ್ರಬಂದಗಳ ಅಧ್ಯಯನ ಅವಲೋಕಿಸಿ ಹೆಚ್ಚಿನ ಜ್ಞಾನ ಮಕ್ಕಳಿಗೆ ನೀಡಬೇಕು. ಹಳಗನ್ನಡ ಸಾಹಿತ್ಯವೆಂದರೆ ಅದು ನಮ್ಮ ಪೂರ್ವಜರ ಇತಿಹಾಸ, ಕನಸು, ಪರಂಪರೆಯನ್ನು ಹಾಗೂ ಪ್ರಾಚೀನತೆ ಅದ್ಯಯನ ಮಾಡಿದಂತೆ. ಹೊಸಗನ್ನಡದಲ್ಲಿ ಇಲ್ಲದಂತಹ ಅನೇಕ ಅಂಶಗಳನ್ನು ಭಾಷಾ ಗಟ್ಟಿತನವನ್ನು ಹಳಗನ್ನಡ ದಲ್ಲಿದೆ. ಇಂದಿನ ಶಿಕ್ಷಕರಿಗೆ ಹಳಗನ್ನಡ ಸಾಹಿತ್ಯ ಬೋಧನೆ ಶಿಬಿರ ಅಗತ್ಯವಾಗಿದೆ ಎಂದರು.

ಕನ್ನಡ ವಿ.ವಿ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು, ಶಿಬಿರದ ಮುಖ್ಯಸ್ಥ ಡಾ.ವೀರೇಶ ಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಆನಂದ ದೇಶಪಾಂಡೆ, ಶಿರಸಂಗಿ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಅಧ್ಯಕ್ಷ ಪ್ರೊ.ಪಿ.ಬಿ.ಬಡಿಗೇರ, ಜಿಲ್ಲಾ ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಸಂತೋಷ ತಳಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ಬಸನ್ನವರ ಉಪಪ್ರಾಚಾರ್ಯ ಮಹಾಂತೇಶ ನರಸನಗೌಡರ, ಹಿರಿಯ ಸಾಹಿತಿ ತಾತಾಸಾಹೇಬ ಬಾಂಗಿ, ಸಿದ್ದಣ್ಣ ಉತ್ನಾಳ, ಡಾ.ಚಂದ್ರಶೇಖರ ಕಾಳನ್ನವರ, ಸಂಗಮೇಶ ಬಡಿಗೇರ ಸಹಿತ ಹಲವರು ಇದ್ದರು.

ಬಿ.ಸಿ.ಮಲಕನ್ನವರ ನಿರೂಪಿಸಿದರು. ಎ.ಎಸ್.ಬಾಗಿ ವಂದಿಸಿದರು. 4 ದಿನಗಳ ಶಿಬಿರದಲ್ಲಿ 80ಕ್ಕೂ ಹೆಚ್ಚು ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮಕ್ಕೂ ಮುಂಚೆ ನಗರದ ಎ.ಜಿ.ದೇಸಾಯಿ ವೃತ್ತದಿಂದ ಡಾ. ರಾಜಕುಮಾರ ರಸ್ತೆ ಮಾರ್ಗವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಕನ್ನಡ ಭುವನೇಶ್ವರಿ ಮೆರವಣಿಗೆ ಜರುಗಿತು. ಲಿಂಗೈಕ್ಯ ಓಲೇಮಠದ ಡಾ.ಚೆನ್ನಬಸವ ಶ್ರೀಗಳಿಗೆ ಒಂದು ನಿಮಿಷ ಮೌನಾಚರಣೆಯೊಂದಿಗೆ ಶೃದ್ಧಾಂಜಲಿ ಸಲ್ಲಿಸಲಾಯಿತು.

## ಜುಡೋ ಮಿನಿ ಒಲಂಪಿಕ್: ಒಂದೇ ಗರಡಿಮನೆಯಿಂದ 7 ಜನ ರಾಜ್ಯಮಟ್ಟಕ್ಕೆ ಆಯ್ಕೆ



**ರಬಕವಿ-ಬನಹಟ್ಟಿ :** ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಇಂದಿನಿಂದ (ದಿ.15, ಶುಕ್ರವಾರ) ಜರುಗಿದ ರಾಜ್ಯ ಸರ್ಕಾರದ ಮಿನಿ ಒಲಂಪಿಕ್‌ಗೆ 14 ವಯೋಮಿತಿಯೊಳಗಿನ ಬಾಗಲಕೋಟೆ ಜಿಲ್ಲಾ ಅಸೋಸಿಯೇಶನ್‌ದಿಂದ ರಬಕವಿ-ಬನಹಟ್ಟಿ ತಾಲೂಕಿನ ಬನಹಟ್ಟಿಯ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಒಂದೇ ಗರಡಿಮನೆಯಿಂದ 7 ಜನ ಕ್ರೀಡಾಪಟಗಳು ಕಣದಲ್ಲಿರುವದು ವಿಶೇಷ.

ಸದಾಶಿವ ತುಂಗಳ(25ಕೆಜಿ), ಶ್ರೀಮಂತ ಕಪರಟ್ಟಿ(45ಕೆಜಿ), ಅನಸ್ ಅಪರಾಧ(50ಕೆಜಿ), ಕಾರ್ತಿಕ ಮಡ್ಡಿ(55ಕೆಜಿ), ಆದಿತ್ಯ ಹಟ್ಟಿ ಪಾಟೀಲ(60ಕೆಜಿ), ಮಹಾದೇವ ಭುಜರುಕ್(66ಕೆಜಿ), ಪ್ರಫಿತ್ ಅಜ್ಜಪ್ಪಗೋಳ(66ಕೆಜಿ) ರಾಜ್ಯಮಟ್ಟದ ಕ್ರೀಡೆಯಲ್ಲಿ ಪಾಲ್ಗೊಳ್ಳಲಿದ್ದಾರೆ,

ಹಿರಿಯ ತರಬೇತು(ವಸ್ತಾದ)ದಾರರಾದ ಕಾಡಪ್ಪ ಜಿಡ್ಡಿಮನಿ, ತಮ್ಮಣ್ಣಿ ನಾಯಕ, ಗುರುಪಾದ ಕತ್ತಿ, ಬಂದೇನವಾಜ್ ಅಪರಾಧ, ಕಾಡಪ್ಪ ಮಹಿಷವಾಡಗಿ, ರಮೇಶ ಜಿಡ್ಡಿಮನಿ ಕ್ರೀಡಾಪಟುಗಳಿಗೆ ತರಬೇತಿ ನೀಡುವಲ್ಲಿ ಯಶಸ್ವಿ ಕಂಡು ಇಷ್ಟೊಂದು ಕುಸ್ತಿಪಟುಗಳನ್ನು ರಾಜ್ಯಮಟ್ಟಕ್ಕೆ ಏಕಕಾಲಕ್ಕೆ ಆಯ್ಕೆಯಲ್ಲಿ ಪ್ರಮುಖ ಕಾರಣವಾಗಿದೆ.

### ಶಿವಶರಣ ಮೇದಾರ ಕೇತೇಶ್ವರರ 894ನೇ ಜಯಂತಿ ಆಚರಣೆ
# ಶಿವಶರಣ ಬದುಕು ಸದಾ ಸ್ಮರಣೀಯ: ಡಾ. ಎಂ.ಎಂ. ಮೇದಾರ

**ಮಹಾಲಿಂಗಪುರ :** ಬಸವಾದಿ ಶಿವಶರಣರ ಬದುಕು, ಅವರು ತೋರಿಸಿದ ಕಾಯಕ, ದಾಸೋಹ, ಸಮಾನತೆಯ ತತ್ವಗಳು 800 ವರ್ಷಗಳ ನಂತರವೂ ಸದಾ ಸ್ಮರಣೀಯವಾಗಿವೆ ಎಂದು ಮೇದಾರ ಸಮಾಜದ ಹಿರಿಯರಾದ ಮಹಾದೇವಪ್ಪ ಮೇದಾರ ಹೇಳಿದರು.

ಶುಕ್ರವಾರ ಪಟ್ಟಣದ ಪುರಸಭೆ ಸದಸ್ಯ ಬಸವರಾಜ ಬುರುಡ ಅವರ ಅಂಗಡಿಯಲ್ಲಿ ಶ್ರೀಗುರು ಮೇದಾರ ಕೇತೇಶ್ವರ ಗಿರಿಜನ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಶಿವಶರಣ ಮೇದಾರ ಕೇತೇಶ್ವರರ 894ನೇ ಜಯಂತಿ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಬಸವಾದಿ ಶಿವಶರಣರಲ್ಲಿ ಒಬ್ಬರಾಗಿದ್ದ ಕೇತೇಶ್ವರರು




ನಮ್ಮ ಸಮಾಜದ ಕುಲದೇವರಾಗಿದ್ದು, ಸಮಾಜದ ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಕೇತೇಶ್ವರ ಭಾವಚಿತ್ರವಿಟ್ಟು ನಿತ್ಯ ಪೂಜಿಸಬೇಕು. ಇಂದಿನ ಯುವಕರಿಗೆ ನಮ್ಮ ಪೂರ್ವಜರ ಚರಿತ್ರೆ, ಕಥೆಗಳನ್ನು ಹೇಳುವ ಮೂಲಕ ಶರಣರ ಬದುಕಿನ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗಳು ಸಾರ್ಥಕವಾಗುತ್ತವೆ ಎಂದರು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಸದಸ್ಯರಾದ ಶೇಖರ ಅಂಗಡಿ, ಮುಖಂಡರಾದ ರಾಜೇಶ ಭಾವಿಕಟ್ಟಿ, ನಾಗಪ್ಪ ಮುದಕವಿ, ಮಹಾಲಿಂಗ ಶಿವಣಗಿ, ಶ್ರೀಗುರು ಮೇದಾರ ಕೇತೇಶ್ವರ ಗಿರಿಜನ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಬಸಪ್ಪ ಬುರುಡ, ಕಾರ್ಯದರ್ಶಿ ಬಸಪ್ಪ ಮ. ಬುರುಡ, ಖಜಾಂಜಿ ಮಹಾಲಿಂಗ ಕ.ಬುರುಡ, ಸದಸ್ಯರಾದ ಮಾರುತಿ ಮೇದಾರ, ರಾಯಪ್ಪ ಬುರುಡ, ಮಹಾಲಿಂಗ ಬುರುಡ, ಶಿವಾನಂದ ಬುರುಡ, ಅನೀಲ ಮೇದಾರ, ಮಹೇಶ ಬುರುಡ, ಸಂತೋಷ ಮೇದಾರ, ಯಲ್ಲಪ್ಪ ಮೇದಾರ, ರಮೇಶ ಬುರುಡ, ಅನಿತಾ ಶಿ.ಬುರುಡ, ಲಕ್ಷ್ಮೀ ಅ.ಮೇದಾರ, ಮಾನೇಶ ಮೇದಾರ, ಆನಂದ ಮೇದಾರ, ಪ್ರವೀಣ ಮೇದಾರ, ಅನೀಲ ಮೇದಾರ ಸೇರಿದಂತೆ ಯುವಕರು, ಮಹಿಳೆಯರು ಇದ್ದರು.

## ರನ್ನಬೆಳಗಲಿ ಪುರಾತನ ಅಗಸಿ ಬಾಗಿಲು ನವೀಕರಣ ಕಾಮಗಾರಿಗೆ ಚಾಲನೆ



**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಪುರಾತನ ಅಗಸಿ ಬಾಗಿಲು ನವೀಕರಣ ಕಾಮಗಾರಿಗೆ ಗುರುವಾರ ಸಚಿವ ಆರ್.ಬಿ.ತಿಮ್ಮಾಪೂರ ಚಾಲನೆ ನೀಡಿದರು.

ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ರನ್ನಬೆಳಗಲಿಯ ಅಭಿವೃದ್ಧಿಗೆ ನಾನು ಸದಾ ಸಿದ್ಧನಾಗಿದ್ದೇನೆ. ಶೀತಲಗೊಂಡಿದ್ದ ರನ್ನಬೆಳಗಲಿಯ ಪುರಾತನ ಅಗಸಿ ಬಾಗಿಲು ನವೀಕರಣ ಕಾಮಗಾರಿಗೆ ಪ್ರಸ್ತುತ 10 ಲಕ್ಷ ಮೊತ್ತಗಳ ಮೊದಲ ಹಂತದ ಅನುದಾನ ಬಿಡುಗಡೆಯಾಗಿದೆ. ನಿರ್ಮಾಣದ ಕಾರ್ಯಕ್ಕೆ ಅನುಗುಣವಾಗಿ ಹೆಚ್ಚಿನ ಅನುದಾನ ಬೇಕಾದಲ್ಲಿ ಮಂಜೂರಿ ಮಾಡಲಾಗುವದು ಎಂದರು.

ಸ್ಥಳೀಯ ವಾರ್ಡಿನ ಸದಸ್ಯರಾದ ಪ್ರವೀಣ ಪಾಟೀಲ ಮಾತನಾಡಿ ಸಚಿವರ ಸಹಕಾರದೊಂದಿಗೆ ವಾರ್ಡಿನ ಮೂಲಭೂತ ಸೌಲಭ್ಯಗಳನ್ನು ಕೊಡಿಸುವುದರಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿ ವಾರ್ಡಿನ ಅಭಿವೃದ್ಧಿಗೆ ಪ್ರಯತ್ನಿಸುತ್ತೇನೆ ಎಂದರು.

ಹಿರಿಯರಾದ ನ್ಯಾಯವಾದಿ ಶಿವನಗೌಡ ಪಾಟೀಲ, ಕೃಷ್ಣಪ್ಪ ಕನಕರೆಡ್ಡಿ, ರಾಜು ಭಗವಾನ, ಶಿವಪ್ಪ ಮಂಟೂರ, ಸಂಗಪ್ಪ ಅಮಾತಿ, ಈರಪ್ಪ ಕಿತ್ತೂರು, ಯಮನಪ್ಪ ದೊಡ್ಡಮನಿ,

ಅಶೋಕ ಪಾಟೀಲ, ಪಪಂ ಸದಸ್ಯರಾದ ಮುಬಾರಕ ಅತ್ತಾರ, ನೀಲಕಂಠ ಸೈದಾಪುರ, ಮುತ್ತಪ್ಪ ಸನ್ನಟ್ಟಿ, ಮುತ್ತಪ್ಪ ನಾಯಕ, ಮುಖಂಡಾರ ಮಹದೇವ ಹಾದಿಮನಿ, ಮಲ್ಲಪ್ಪ ಮಲಾವಡಿ, ಸದಾಶಿವ ಕುಲಗೋಡ, ಕಲ್ಲಪ್ಪ ಹೊಸಟ್ಟಿ, ಹನಮಂತ ಪೂಜಾರಿ, ಮುದಕಪ್ಪ ದೋಬಸಿ,ಲಕ್ಷ್ಮಣ ಹಂಚಿನಾಳ, ಚನ್ನಪ್ಪ ಜಾಲಿಕಟ್ಟಿ, ಸಂತೋಷ ಮಲಾವಡಿ, ಮುತ್ತಪ್ಪ ಶಂಕ್ರಟ್ಟಿ, ಸುಭಾಷ್ ಪುರಾಣಿಕ, ರಾಮನಗೌಡ ಪಾಟೀಲ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

## ಚಿಮ್ಮಡಕ್ಕೆ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭೇಟಿ ಪರಿಶೀಲನೆ



**ಚಿಮ್ಮಡ :** ಗ್ರಾಮದ ಹಲವೆಡೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ತಮ್ಮ ಅಧಿಕಾರಿಗಳ ತಂಡದೊಂದಿಗೆ ಚಿಮ್ಮಡ ಗ್ರಾಮಕ್ಕೆ ಭೇಟಿ ನೀಡಿ ಹಲವು ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಬುಧವಾರ ಸಂಜೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದಾಗ ಇಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿದ್ದರೂ ಸ್ಟಾಪ್ ನರ್ಸ (ಶುಶ್ರುಕಿ) ಸಿಬ್ಬಂದಿ ಕೊರತೆಯಿಂದ ಇಲ್ಲಿನ ಬಡ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗುತ್ತಿದ್ದು ಕೂಡಲೆ ಆಸ್ಪತ್ರೆಗೆ ನರ್ಸ ನೇಮಕಗೊಳಿಸುವಂತೆ ಗ್ರಾಮಸ್ಥರು ಅಧಿಕಾರಿಗಳಲ್ಲಿ ಮನವಿ ಮಾಡಿದರು. ಈ ಕುರಿತು ಸಂಭಂದಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅಲ್ಲದೇ ಅನುದಾನ ಬಿಡುಗಡೆಯಾಗದೆ ಸ್ಥಗಿತಗೊಂಡಿರುವ ಸಂಜೀವಿನಿ ಸೆಡ್ ಕಾಮಗಾರಿಗೆ ಅವಶ್ಯವಿರುವ ಅನುದಾನ ಬಿಡುಗಡೆಗೊಳಿಸುವುದಾಗಿ ತಿಳಿಸಿದರು. ಗ್ರಾಮದಲ್ಲಿ ಕುಂಟುತ್ತಾ ಸಾಗಿರುವ ಜಲ್ ಜೀವನ್ ಮಿಷನ್ (ಜೆ.ಜೆ.ಎಂ) ಕಾಮಗಾರಿಯ ಟ್ಯಾಂಕ್ ಹಾಗೂ ಸಂಪು ಇರುವ ಸ್ಥಳಕ್ಕೆ ಭೇಟಿ ನೀಡಿ ಜೆ. ಜೆ. ಎಂ. ಕಾಮಗಾರಿ ಈಗಾಗಲೇ ತುಂಬಾ ತಡವಾಗಿದ್ದು, ಕೂಡಲೇ ಮುಕ್ತಾಯಗೊಳಿಸಬೇಕೆಂದು ಗುತ್ತಿಗೆದಾರರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರರೊಂದಿಗೆ ರಬಕವಿ-ಬನಹಟ್ಟಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪಾ ಪಟ್ಟಿಹಾಳ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜೆ. ಪಿ. ಶೆಟ್ಟಿ, ವಿಭಾಗಾಧಿಕಾರಿ ಸುರೇಶ ಪಂಚಾಳ ಆಗಮಿಸಿದ್ದರು.

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಅಶೋಕ ಮೋಟಗಿ, ಗ್ರಾಮ ಪಂಚಾಯತ್ ಸದಸ್ಯರಾದ ನಾಗಪ್ಪಾ ಆಲಕನೂರ ಅರುಣ ಗಾಣಿಗೇರ, ಹಣಮಂತ ಬಜಂತ್ರಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ, ವೈದ್ಯಾಧಿಕಾರಿ ಡಾ. ಕೆ. ಎಸ್. ತಳ್ಳಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

# ಬೆಂಬಲ ಬೆಲೆಯಲ್ಲಿ ಬೀಳಿಜೋಳ ಖರೀದಿ

**ಬಾಗಲಕೋಟೆ :** ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಬಿಳಿಜೋಳ (ಮಾಲ್ದಂಡಿ) ಉತ್ಪನ್ನಕ್ಕೆ ಪ್ರತಿ ಕ್ವಿಂಟಲ್‌ಗೆ 3421 ರೂ. ಹಾಗೂ ಬಿಳಿಜೋಳ (ಹೈಬ್ರಿಡ್) ಪ್ರತಿ ಕ್ವಿಂಟಲ್‌ಗೆ 3371 ರೂ.ಗಳಂತೆ ಖರೀದಿ ಮಾಡಲಾಗುತ್ತಿದೆ ಎಂದು ಜಿಲ್ಲಾ ಟಾಸ್ಕಪೋರ್ಸ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು ಡಿಸೆಂಬರ 1ರಿಂದ ನೋಂದಣಿ ಕಾರ್ಯ ಪ್ರಾರಂಭಿಸಲಾಗುತ್ತಿದ್ದು, ಜನವರಿ 1, 2025 ರಿಂದ ಮಾರ್ಚ 31, 2025 ವರೆಗೆ ಖರೀದಿ ಕಾರ್ಯ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಜಿಲ್ಲೆಯ ರೈತ ಬಾಂಧವರು ಖರೀದಿ ಕೇಂದ್ರಗಳಲ್ಲಿ ಆನ್‌ಲೈನ್ ಮುಖಾಂತರ ಮಾಡಲಾಗುತ್ತಿದ್ದು, ರೈತರು ಕೃಷಿ ಇಲಾಖೆಯಿಂದ ಪಡೆದಿರುವ ಫ್ರೂಟ್ಸ್ ಐಡಿ ಮತ್ತು ಆಧಾರಕಾರ್ಡ, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್ ಮುಖಪುಟದ ಛಾಯಾಪ್ರತಿಯೊಂದಿಗೆ ಬಂದು ಕಡ್ಡಾಯವಾಗಿ ನೋಂದಣಿ ಕೇಂದ್ರಕ್ಕೆ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ (9448496010)ಇವರನ್ನುಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಆಯಾತಾಲೂಕಿನಕೆ.ಎಫ್.ಸಿ.ಎಸ್.ಸಿವ್ಯವಸ್ಥಾಪಕರು ಎಪಿಎಂಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಬಾಗಲಕೋಟೆ, ಹುನಗುಂದ, ಎಪಿಎಂಸಿ ಉಪ ಮಾರುಕಟ್ಟೆ ಪ್ರಾಂಗಣ ಇಳಕಲ್ಲ, ಎಪಿಎಂಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಬಾದಾಮಿ, ಹೊಳೆಬಸು ಶೆಟ್ಟರ ಗೋದಾಮು ಗುಳೇದಗುಡ್ಡ, ಟಿ.ಎ.ಪಿ.ಸಿ.ಎಂ.ಎಸ್ ಗೋದಾಮು ಬೀಳಗಿ, ಎಪಿಎಂಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಜಮಖಂಡಿ, ಕೆ.ಎಫ್.ಸಿ.ಎಸ್.ಸಿ ರಬಕವಿ-ಬನಹಟ್ಟಿ, ಹಾಗೂ ಮುಧೋಳ ಖರೀದಿ ಕೇಂದ್ರಗಳಲ್ಲಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಜರುಗಲಿದೆ ಎಂದು ತಿಳಿಸಿದ್ದಾರೆ.

# ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಗುಣಮಟ್ಟದ ಶಿಕ್ಷಣ ಅಗತ್ಯ-ಗಚ್ಚಿನಮನಿ




**ಕೊಪ್ಪಳ :** ಇಂದಿನ ಮಕ್ಕಳೇ ಈ ನಾಡಿನ ಭಾವಿ ಪ್ರಜೆಗಳಾಗಿದ್ದು ಅವರ ಭವಿಷ್ಯ ಉಜ್ವಲ ಗೊಳ್ಳಲು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಅಗತ್ಯವಾಗಿದೆ ಎಂದು ಕೊಪ್ಪಳದ ಉದ್ಯಮಿ ಲ್ಯಾಂಡ್ ಡೆವಲೊಪರ್ ಕರೀಂ ಪಾಷಾ ಗಚ್ಚಿನಮನಿ ಹೇಳಿದರು.

ಅವರು ಗುರುವಾರ ನಗರದ ಮಿಲ್ಲತ್ ಪಬ್ಲಿಕ್ ಶಾಲೆಯಲ್ಲಿ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ ವತಿಯಿಂದ ಏರ್ಪಡಿಸಿದ ಮಕ್ಕಳ ದಿನಾಚರಣೆ ಸಮಾರಂಭದ ಉದ್ಘಾಟನೆ ನೆರವೇರಿಸಿ ಪಂಡಿತ್ ಜವಾಹರ್ ಲಾಲ್ ನೆಹರು ರವರ ಭಾವಚಿತ್ರಕ್ಕೆ ಪುಷ್ಪ ನಮನ ಮಾಡಿ ಗೌರವ ನಮನ ಸಲ್ಲಿಸಿ, ಬಳಿಕ ಏರ್ಪಡಿಸಿದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು,

ಪಂಡಿತ್ ಜವಾಹರ್ ಲಾಲ್ ನೆಹರು ರವರಿಗೆ ಮಕ್ಕಳ ಬಗ್ಗೆ ಅಪಾರವಾದ ಪ್ರೀತಿ ಇತ್ತು ಅದ-ಕ್ಕೆ ಅವರು ತಮ್ಮ ಜನ್ಮದಿನಾಚರಣೆಯನ್ನು ಮಕ್ಕಳ ದಿನಾಚರಣೆಯನ್ನಾಗಿ ಪರಿವರ್ತಿಸಿದರು, ಮಕ್ಕಳು ಕೂಡ ಅವರನ್ನು ಚಾಚಾ ನೆಹರು ಎಂದು ಕರೆ-ಯುತ್ತಿದ್ದರು ಎಂದು ಹೇಳಿದರು. ಮುಂದುವರೆದು ಮಾತನಾಡಿ ಅಲ್ಪಸಂಖ್ಯಾತ ಸಮುದಾಯದ ಮಕ್ಕಳಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದ್ದು ಅದರ ಸದಬಳಕೆ ಮಾಡಿಕೊಂಡು ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು ಏಕೆಂದರೆ ಶಿಕ್ಷಣದಿಂದ ಮಾತ್ರ ಸರ್ವಾಂಗೀಣ ಅಭಿವೃದ್ಧಿ ಕಾಣಲು ಸಾಧ್ಯ ,ಎಲ್ಲಾ ಕ್ಷೇತ್ರದ ಅಭಿವೃದ್ಧಿ ಶಿಕ್ಷಣ ರಂಗದಲ್ಲಿ ಅಡಗಿದೆ ಎಂದು ಉದ್ಯಮಿ ಕರೀಂ ಪಾಷಾ ಗಚ್ಚಿನಮನಿ ಹೇಳಿದರು.

ಸಮಾರಂಭ ದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಮಾಜದ ಯುವ ನಾಯಕ ಲ್ಯಾಂಡ್ ಡೆವಲೊಪರ್ ಇಬ್ರಾಹಿಂ ಪಟೇಲ್ ಮಾತನಾಡಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗೆ ಪ್ರತಿಯೊಬ್ಬ ಸಮಾಜ ಸೇವಕರು ಸಹಕಾರ ನೀಡಬೇಕು ,ಈ ಸಂಸ್ಥೆಗೆ ನನ್ನ ಸಹಕಾರ ಕೂಡ ಇದೆ ಎಂದರು, ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಮುಖ್ಯ ಸಲಹೆಗಾರ ಎಂ ಸಾಧಿಕ್ ಅಲಿ ವಹಿಸಿದ್ದರು, ವೇದಿಕೆ ಮೇಲೆ ಮುಖ್ಯ ಅತಿಥಿಗಳಾಗಿ ಅಂಜುಮನ್ ಕಮಿಟಿ ಅಧ್ಯಕ್ಷ ಎಂ ಡಿ ಆಸೀಫ್ ಕರ್ಕಿಹಳ್ಳಿ ,ಶಾಲೆಯ ಕಾರ್ಯನಿರ್ವಾಹಕ ಸಂಚಾಲಕರಾದ ಸೈಯದ್ ಇಮಾಮ್ ಹುಸೇನ್ ಸಿಂದೋಗಿ, ಅಬ್ದುಲ್ ಅಜೀಜ್ ಮಾನ್ವಿ ಕರ್ ಸೇರಿದಂತೆ ಶಾಲೆಯ ಮುಖ್ಯ ಶಿಕ್ಷಕ ಮೊಹಮ್ಮದ್ ಅಜೀಜ್ ರೆವಡಿ ಹಿರಿಯ ಶಿಕ್ಷಕ ನರಸಿಂಹ ದೇಸಾಯಿ ಅನೇಕರು ಪಾಲ್ಗೊಂಡಿದ್ದು ಶಾಲೆಯ ಶಿಕ್ಷಕರುಗಳು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ನಂತರ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆ ಗಳಲ್ಲಿ ಸ್ಪರ್ಧಿಸಿದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು ಅಲ್ಲದೆ ಉದ್ಘಾಟಕರಾಗಿ ಆಗಮಿಸಿದ ಉದ್ದಮಿ ಕರಿಂ ಪಾಷಾ ಗಚ್ಚಿನಮನಿ ರವರಿಗೆ ಸಂಸ್ಥೆಯ ಪರವಾಗಿ ಸನ್ಮಾನಿಸಲಾಯಿತು.

# ಲೈಸನ್ಸ್ ಹೊಂದಿದ ಶಸ್ತ್ರಾಸ್ತ್ರ ಜಮೆ ಮಾಡಲು ಆದೇಶ

**ವಿಜಯಪುರ :** ವಿಜಯಪುರ ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 29ರಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸ್ಥಾನಕ್ಕೆ ಉಪ ಚುನಾವಣೆ ಘೋಷಣೆಯಾಗಿರುವುದರಿಂದ ಶಾಂತಿ ಸುವ್ಯವಸ್ಥೆ ಕಾಪಾಡಲು ಮುಂಜಾಗ್ರತಾ ಕ್ರಮವಾಗಿ ಚುನಾವಣೆ ನಡೆಯುವ ಮಹಾನಗರ ಪಾಲಿಕೆ ವಾರ್ಡ್ ನಂ.29ರ ವ್ಯಾಪ್ತಿಯಲ್ಲಿನ ಆಯುಧ ಲೈಸನ್ಸದಾರರು ತಮ್ಮ ಎಲ್ಲ ಶಸ್ತ್ರಾಸ್ತ್ರಗಳನ್ನು ಹಾಗೂ ಮದ್ದು ಗುಂಡುಗಳನ್ನು ತಕ್ಷಣವೇ ಸಮೀಪದ ಪೊಲೀಸ್ ಠಾಣೆಯಲ್ಲಿ ಜಮೆ ಮಾಡುವಂತೆ ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಆದೇಶ ಹೊರಡಿಸಿದ್ದಾರೆ. ಎಲ್ಲ ಆಯುಧ ಲೈಸನ್ಸದಾರರು ತಮ್ಮ ಎಲ್ಲಾ ಶಸ್ತ್ರಾಸ್ತ್ರಗಳು ಅಂದರೆ ಎಸ್.ಬಿ.ಬಿ.ಎಲ್/ ಡಿ.ಬಿ.ಬಿ.ಎಲ್, ಬಂದೂಕು, ರೈಫಲ್, ರಿವಾಲ್ವರ್ ಹಾಗೂ ಪಿಸ್ತೂಲುಗಳನ್ನು ಹೊಂದಲು ಕೊಟ್ಟ ಲೈಸನ್ಸ್ ಗಳನ್ನು ನವೆಂಬರ್ 04 ರಿಂದ ನವೆಂಬರ್ 26ರವರೆಗೆ ಸ್ಥಗಿತಗೊಳಿಸಲಾಗಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State